B. Ananda
P.O. Asangoli S.
1-2-1973.

ಯಕ್ಷಗಾನ

(ಸ್ಕಾಂದ ಪುರಾಣಾಂತರ್ಗತ)

ಅಂಶುಮತಿ ಕಲ್ಯಾಣ

ಲೇಖಕ — ಪ್ರಕಾಶಕ :

ಡಿ. ವಿ. ಹೊಳ್ಳ, ವಿದ್ವಾನ್.

P. O. ತೆಕ್ಕಟ್ಟೆ (ಕುಂದಾಪುರ, ದ. ಕ.)

ಮುದ್ರಕರು :

ದಿನೇಶ್ ಪ್ರಿಂಟರ್ಸ್, ಬ್ರಹ್ಮಾವರ, ದ. ಕ.

ಬೆಲೆ: 0–75 ಪೈಸಾ

ಪಾತ್ರಗಳ ವಿವರ:

ಸತ್ಯರಥ (ವಿದರ್ಭರಾಜ)	ಚಿತ್ರಾಕ್ಷ (ಪಾಂಡ್ಯರಾಜ)
ಚಿತ್ರಕೇತ (ಸತ್ಯರಥನ ಮಂತ್ರಿ)	ಸಾಲ್ವ
ಧರ್ಮಗುಪ್ತ (,, ಮಗ)	ವೀರಬಾಹು (ಸಾಲ್ವನ ಮಂತ್ರಿ)
ಸುಶೀಲೆ (,, ಪತ್ನಿ)	ಊರ್ಧ್ವಕೇಶಿ (,, ಮಗ)
ದ್ರಮಿಳ (ಗಂಧರ್ವರಾಜ)	ಭದ್ರಕೇಶಿ (,, ಮಂತ್ರಿ)
ಶುಚಿವ್ರತ (ವಿಪ್ರಕುಮಾರ)	ಕುಂಭಸ್ತನಿ (,, ತಂಗಿ)
ಈಶ್ವರ	ಶುಕ್ರಾಚಾರ್ಯ (ದೈತ್ಯಗುರು)
ವೀರಭದ್ರ	ನಾರದ (ದೇವರ್ಷಿ)
ಶಾಂಡಿಲ್ಯ ಋಷಿ	ದುರ್ದಂತ (ಕಿರಾತರಾಜ)
ಅಂಶುಮತಿ	ಚಂಡಿಕೆ (ಭದ್ರಕಾಳಿ)
ಪಾರ್ವತಿ	ಬ್ರಾಹ್ಮಣ ಸ್ತ್ರೀ
ಅಂಶುಮತಿಯ ಸಖಿಯರು	ಸಾಲ್ವನ ಪತ್ನಿ
ದೂತರು ಇತ್ಯಾದಿ.	

❋ ❋ ❋

ಓಂ

ಶ್ರೀ ಪರಬ್ರಹ್ಮಣೇ ನಮಃ

ಓಂ ಶ್ರೀ ಮಹಾಗಣೇಶಾಯ ನಮಃ

ಯಕ್ಷಗಾನ

ಅಂಶುಮತಿ ಕಲ್ಯಾಣ

[ಪ್ರದೋಷ ಮಹಾತ್ಮೆ]

। ಶಾರ್ದೂಲ ವಿಕ್ರೀಡಿತ ವೃತ್ತ ।

ಶ್ರೀಮತ್ಸಾಂಬ ಸುಧಾಂಶು ಶೇಖರನುಮಾಕಾಂತೇಶ್ವರಂ ಶಂಕರಂ
ಸೋಮಾರ್ಕಾನಲ ನೇತ್ರನಾನತಕುಲೋದ್ಧಾರಂತ್ರಿಲೋಕೇಶ್ವರಂ ।
ಸೀಮಾತೀತನ ಧೋಕ್ಷಜಾಪ್ತನಘಸಂಹಾರಂದಯಾ ಸಾಗರಂ ।
ಪ್ರೇಮಂಬೆತ್ತು ನಿರಂತರಂ ಪೊರೆಗೆ ಮಾಲಿಂಗೇಶ್ವರಂ ಸರ್ವದಾ ॥೧॥

ರಾಗ–ನಾಟಿ | ತಾಳ–ಝಂಪೆ

ಜಯತು ಜಯತು ವಿಘ್ನೇಶ್ವರ । ಜಯ ಜಯ ಭೂತಾಧೀಶ್ವರ । ಜಯ ಜಯ ಬುದ್ಧಿಪ್ರದಾತ । ಜಯ ಜಯ ಗಣನಾಥ ॥ ಪಲ್ಲವಿ ॥ ಶ್ರೀ ಗಿರಿಜಾ ಪುತ್ರನೆ ವರ । ಯೋಗಿಜನ ಸ್ತುತಿಪಾತ್ರನೆ । ನಾಗಾಭರಣನೆ ಸುರನರ । ನಾಗಾರ್ಚಿತ ಚರಣ ॥ ಸಾಗರ ಗಂಭೀರನೆ ವೇ। ದಾಗಮ ವೇದ್ಯನೆ ಭವಭಯ । ಸಾಗರ ತಾರಕನೇ ಶರ । ಣಾಗತ ವತ್ಸಲನೇ ॥೧॥ ಮನೆ ಮನೆಯೊಪ್ಪಿಪ ಪರಕೆಯ । ಘನ ಪಾಯಸ ಕಜ್ಜಾಯವ । ತನಿ ರಸಫಲ ಕ್ಷೀರಾನ್ನವ । ವಿನಯದಿ ಕೈಗೊಂಬಾ ॥ ಬೆನಕನೆ ಬಿಂಕಣಗಿವಿಯನೆ । ಜನನ ಮರಣ ಭಯದೂರನೆ । ನೆನೆಯುವೆ ನಾ ನಿನ್ನಡಿಗಳ । ಅನುಗೊಳಿಸೈ ಶುಭವ ॥ ೨ ॥ ಸರಸತಿಯೇ ಕೊಡು ಸುಮತಿ

ಧು । ಗುರು ವಿಬುಧರನೆಚ್ಚರಿಸುವ । ಪರಮೇಷ್ಠಿಯ ರಾಣಿಯೆ ಭಾ । ಸುರ ವೀಣಾಧರೆಯೆ ॥ ತರಳನ ಕೃತಿಯಲಿ ದೋಷವು । ಬರದಂತೆಯೆ ಪಾಲಿಸು ಶುಭ । ಕರುಣೆಯೊಳೆನ್ನೀ ರಸನೆಯೊ । ಳಿರು ಪ್ರಾರ್ಥಿಪೆ ನಿನ್ನ ॥ ೩ ॥

॥ ಭಾಮಿನಿ ॥

ಹರಿಹರ ಬ್ರಹ್ಮಾಮಹೇಂದ್ರರ । ತರಣಿ ಚಂದ್ರಾದಿ ಗ್ರಹರ ಶ್ರೀ ಗಿರಿಜೆ ಶಾರದೆ ಮುಖ್ಯ ದೇವಿಯರಡಿಯ ಧ್ಯಾನಿಸುತ ॥ ವರಕವೀಂದ್ರರ ಗುರುಬುಧಾದ್ಯರ । ಹಿರಿಯರಂಘ್ರಿಯ ಸ್ಮರಿಸಿ ಪೇಳ್ವೆ । ವರ ಪ್ರದೋಷ ವ್ರತದ ಮಹಿಮೆಯಸಭ್ಯವನೊಲುಮೆಯಲಿ ॥ ೧ ॥

॥ ದ್ವಿಪದಿ ॥

ಆದಿಕವಿ ವಾಲ್ಮೀಕಿ ಬಾದರಾಯಣರ । ವೇದ ವಿದಭಾಸ ಬಾಣಾದಿ ಕವಿವರರ ॥೧॥ ಕನ್ನಡದ ರನ್ನ ಪೊನ್ನಾದಿ ಕಬ್ಬಿಗರ । ಪಾಮ್ಪ ಲಕ್ಷ್ಮೀಶ ಮುದ್ದಣ ಷಡಕ್ಷರರ ॥ ೨ ॥ ಸ್ಮರಿಸಿ ಪೇಳ್ವೆನು ಶಿವನ ವ್ರತಮಹಾತ್ಮೆಯನು । ಶರಜ ಪೌರಾಣದಲಿ ನೆಗಳ್ದ ಕಥೆಯನ್ನು ॥ ೩ ॥ ಸತ್ಯರಥನಳಿಯಲಾ ಸಾಲ್ವನಿಂದ ವನಾ । ಪತ್ನಿ ಪೆತ್ತಾ ಧರ್ಮಗುಪ್ತನೆಂಬವನ ॥ ೪ ॥ ಉಮೆಯೆಂಬ ವಿಪ್ರಸತಿ ರಕ್ಷಿಸಲ್ಕವನು । ಯಮಿಗಳುಪದೇಶದಿಂದಾಂತು ಬಲವನ್ನು ॥ ೫ ॥ ಧುರದಿ ಸಾಲ್ವನ ಗೆಲಿದು ರಾಜ್ಯವನು ಪಡೆದು । ಚರಿತಾರ್ಥನಾದ ವಿವರವ ಪೇಳ್ವೆನೊಸೆದು ॥ ೬ ॥ ಬಲ್ಲವರು ದೋಷವಿರೆ ತಿದ್ದಿ ಮೆರೆಸುವುದು । ಗೆಲ್ಲವಹುದೋದಿದರೆ ಶಿವನೊಲಿವ ಮುಂದು ॥ ೭ ॥

॥ ಕಂದ ಪದ್ಯ ॥

ಇತ್ತಲ್ ವಿದರ್ಭದೇಶದಿ । ಸತ್ಯರಥಂ ಕ್ಷತ್ರಧರ್ಮದೊಳ್ ರಾಜ್ಯಮನಾ॥ ಳುತ್ತಿರಲೊಂದಿನದೊಳ್ ಸಚಿ । ವೋತ್ತಮನಾ ಚಿತ್ರಕೇತುವೊಡನಿಂತೆಂದಂ॥೧॥

ರಾಗ—ಸೌರಾಷ್ಟ್ರ । ತಾಳ—ತ್ರಿವುಡೆ

ಮಂತ್ರಿವರ ಕೇಳ್ ರಾಜ್ಯಭಾರವ । ನಾಂತೆನಾದರು ಮನದೊಳೇಕೋ । ಶಾಂತಿಯಿಲ್ಲ ರಾಜನೀತಿಯ । ದೆಂತೊ ತಿಳಿಯೆ ॥ ೧ ॥ ದೊರೆತನದಿ ಸುಖವುಂಟೆ ಶತ್ರುಗಳಿರಲು ಪ್ರಜೆಗಳ ರಂಜಿಸುತ ಜಸ । ಮೆರೆಸಲಹುದೇ ಸತ್ಯ ಧರ್ಮಾಚರಣೆಯಿಂದ ॥ ೨ ॥ ಎನಲೊರೆದನಾ ಸಚಿವನಾದ್ಯರ । ಘನತೆಯರಿದರ ಸಾಳ್ತನದಿ ಮೇ। ದಿನಿಯ ಪಾಲಿಸದಿರ್ಪ ಕ್ಷತ್ರಿಯ । ಜನುಮವೇಕೋ॥೩॥

ಕ್ಷಾತ್ರತೇಜದೊಳೆಳೆದ ಹಿರಿಯರ । ಕೀರ್ತಿಯನು ಮೇಲೆತ್ತಿ ಹಗೆಗಳ । ನೊತ್ತಿ ಧರೆಯೊಳ್ಪನೆ ಧನ್ಯನು । ಪಾರ್ಥಿವರಲಿ ॥ ೪ ॥ ಸತ್ಯರಥನಿಂತೆಂದ ನಿಮ್ಮ ನಿ। ಜತ್ವವರಿಯಲು ನುಡಿದೆನಲ್ಲದೆ । ಕ್ಷತ್ರಿಯೋಚಿತ ಧವಳ ಕೀರ್ತಿಗೆ ಪಾತ್ರವೆನೆನು ॥ ೫ ॥ ಆ ದರಯ್ಯನ ಪಾಂಡ್ಯ ದೇಶವ ಸಾಧಿಸುತ ರಿಪುಗಳನು ಕೆಡೆಹೊ । ಯ್ದುದ ಮೇಲಾದಪುದು ಶಾಂತತೆ । ವಾದವೇನು ॥ ೬ ॥

॥ ಭಾಮಿನಿ ॥

ಬದ್ಧವಿದು ಕೇಳ್ ಚೈತ್ರಯಾತ್ರೆಗೆ । ಸಿದ್ಧವಾಗಲಿ ಸುಭಟ ಸಂತತಿ। ಭದ್ರಗಜ ಹಯ ರಥ ಪದಾತಿಗಳೆನೆ ಮಹೋತ್ಸವದಿ ॥ ಅಬ್ಧಿಘೋಷದೊಳಖಿಳಬಲ ಸ । ನ್ನದ್ಧವಾಗಲುದಿಕ್ತಟಂಗಳ । ಮಾರ್ದನಿಯೊಳ್ಪಿದನು ಧರಣಿಪನಧಿಕ ರಭಸದಲಿ ॥ ೧ ॥

॥ ಕಂದ ಪದ್ಯ ॥

ಚಿತ್ತವಿಪ್ಪುದಖಿಳ ಮುನಿಗಳ್ । ಸತ್ಯರಥಂ ಪಾಂಡ್ಯ ದೇಶಕೈತರೆ ಭರದೊಳ್ ॥ ಮುತ್ತಿದರಾ ಪುರಮಂ ಸುಭಟೋತ್ತಮರಿದಿರಾಂತ ಭಟರ ಸದೆಬಡಿಯುತ್ತಂ ॥ ೧ ॥

ರಾಗ—ಕಾಂಬೋದಿ । ತಾಳ—ಝಂಪೆ

ಅನಿತರೊಳಗಾ ಪಾಂಡ್ಯ । ಜನಪನೋಲಗವಿತ್ತು । ಘನ ರಾಜವಿಷ್ಟರದೊಳಿರಲು ॥ ಮಣಿದು ಕೈಮುಗಿದೆಂದ । ರನು ಚರರ್ ಶತ್ರು ಸಂ । ದಣಿಗೈದ ಹಾವಳಿಯನಿಂತು ॥ ೧ ॥ ಜೀಯ ಬಿನ್ನಪ ಶತ್ರು । ರಾಯರೈದಿದರಿತ್ತ । ಧ್ಯೇಯ ಪಾವುದೊ ಪುರವ ಮುತ್ತಿ ॥ ಬಾಯ ಬಿಗಿದೆಮ್ಮವರ । ಸಾಯ ಬಡಿದಟ್ಟಿದರು। ಪಾಯವೇನ್ ಬಾಳ್ವ ಬಗೆಯೆಂತೊ ॥ ೨ ॥ ಚಾರರಿಂತೆನೆ ಮಾರ । ವೈರಿಯಂ ಸಾಕ್ರೋಶ । ವೇರಿ ಚಿತ್ರಾಕ್ಷನಾರ್ಭಟಿಸಿ ॥ ಯಾರಾದರೇಂ ಬರಲಿ । ಮಾರಿಗುಣಲಿಕ್ಕಿ ಜಯ । ಭೇರಿಯನು ಹೊಯ್ಸುದಿರೆನೆಂದ ॥ ೩ ॥ ಕರೆಯಿರೊ ಧುರ ಸ। ಮರ್ಥರ ದಂಡನಾಯಕರ । ಕರಿಹಯೊದ್ಯಖಿಳ ಬಲ ಸಹಿತ ॥ ನೆರಹುತೊಟ್ಟಾಗಿ ಕುರಿ । ದರಿದು ರಿಪುಬಲವ ಯಮ । ಪುರಕಟ್ಟಬೇಹುದೀಕ್ಷಣಕೆ ॥೪॥

ರಾಗ—ಮಾಳವಿ । ತಾಳ—ಏಕ

ಗಳಿಲನೆ ಚಾತು । ರ್ಬಲ ಸಹಿತಾಗಲೆ । ಬಲು ಭಟರೊಟ್ಟಾಗಿ ॥ ಕೊಳುಗುಳಕನುವಾಗಲು ಚಿತ್ರಾಕ್ಷನು । ಪಲುಗಡಿಯುತಲೆದ್ದ ॥ ೧ ॥ ಶರಚಾಪವ

ರ್ಥೀಂ । ಕರಿಸಿ ವಿದರ್ಭನ । ಸರಭಸಕಿದಿರಾಗಿ ॥ ಪರಿಸುತ ರಥವನು । ಬರಲೀ
ನಿಲ್ಲಿಗೆ । ಧುರಧರವೇಕೆಂದ ॥ ೨ ॥ ಶತ್ರುತನವ ಮುರಿ । ದೊತ್ತುತ ರಾಜ್ಯವ।
ನೆತ್ತಲು ಬಂದಿಹೆನು ॥ ಸತ್ವವಿರಲು ಧನು । ವೆತ್ತುವುದೆಂದನು । ಸತ್ಯರಥನು
ನಗುತ ॥೩॥ ಯೂರಿಲೊ ನೀಂ ರಣ । ಧೀರನು ಪೆತ್ತವ । ನಾರ್ಯೆ ಹಗೆತನಕೆ ॥
ಕಾರಣವೇನೆಂದಾರುಭಟಿಸಿ ಕಿಡಿ । ಕಾರಿದನಾ ಪಾಂಡ್ಯ ॥ ೪ ॥

ರಾಗ—ಭೈರವಿ । ತಾಳ—ಅಷ್ಟ

ಧಿರುರೆ ನೃಪಾಧಮನೇ । ಕೇಳ್ವುದೇನೆ–ನ್ನರಿಯದಾದ್ಯೆ ಮೂಡನೆ ।
ವರ ವಿದರ್ಭಾಧಿಪ । ದೊರೆ ಸತ್ಯರಥನ ಸ । ಚ್ಚರಿತೆಯ ತಿಳಿಯದಾರ್ಯೆ ॥ ೧ ॥
ಸತ್ಯರಥನು ನೀನೆಲಾ । ಸತ್ಯಾತ್ಮಗೆ ಶತ್ರುಮಿತ್ರರಧಾರೆಲಾ । ಮಿಥ್ಯಾಚಾರದಿ
ಪೂರ್ವ ಶತ್ರುವೆಂದೆನುತೆನ್ನೊಳ್ । ವ್ಯರ್ಥ ಯುದ್ಧವ ಗೈವೆಯ ॥೨॥ ಮರೆತೆ
ಯೇನಜ್ಞಾನದಿ ನಮ್ಮಯ್ಯನ ಧರೆಯಿದೆಂಬುದ ಮವದಿ । ಸರಸದೊಳಿತ್ತು ನ।
ಮ್ಮರಸಾಳಿಕೆಯಲಿ ವಿ । ಸ್ತರಿಸುವುದತಿ ಕೀರ್ತಿಯ ॥೩॥ ಹೆಣಗಾಡಲೇತಕಯ್ಯ।
ನೀ ತಿಳಿಯದೆ – ಜನಕನ ದುರ್ದಶೆಯ । ಘನ ದೈವ ದ್ರೋಹದಿಂ । ತನುವ
ನೀಗಿದನೆಮ್ಮೊ । ಳನಿತು ವಿರೋಧವೇನ್ನೈ ॥೪॥ ಸಲ್ಲದಾವಮಾತೇತಕೆ । ರಾಜ್ಯವ
ಬಿಡ–ಲೊಲ್ಲೆಯೊದರೆ ಯುದ್ಧಕೆ ನಿಲ್ಲು ನಿಲ್ಲೆಲೊ ರಕ್ತ । ಚೆಲ್ಲಿ ಮೃತ್ಯುವಿಗಿಕ್ಕಿ।
ಸಲ್ಲಿಸಲಿಹೆ ಪಂಥವ ॥೫॥ ಬಿಡುಬಿಡಾಗರುವ ವ್ಯರ್ಥ । ಬಾಯ್ಬಡಿವಾರ–ಕೊಡ
ಹಿ ಸಾಯದಿರು ಧೂರ್ತ ನಿಡುಸರಳುಗಳಿಂದ । ಕೆಡಹಿ ಭೂತಾಹುತಿ । ಕೊಡ
ದಿರ್ಪೆನೇ ಮರುಳೆ ॥೬॥ ಎನುತ ಕಾರ್ಮುಳೆಯಂದದಿ । ಕೂರ್ಗಣೆಗಳ–ಕನಲು
ತೆಚ್ಚನು ರೋಷದಿ । ಕ್ಷಣದಿ ಖಂಡಿಸಿ ಪ್ರತಿ । ಕಣೆಗಳ ತೆಗೆದೆಚ್ಚ । ನಸಿತರೊಳ್
ವೈದರ್ಭನು ॥೭॥

। ಭಾಮಿನಿ ।

ನುಡಿವುದೇನಮನೇಂದ್ರರಭೃದಿ । ನಡುಗುವಂದದೊಳು ಭಯರಾಯ
ರು । ಕಡುಹಿನಿಂದೆಚ್ಚಾಡಿದರು ಭುಜಬಲದೊಳಿದಿರಾಗಿ ॥ ಪೊಡವಿಯಲ್ಲಾಡಲ್ಕೆ
ವೀಣೆಯ । ನುಡಿಸುತಾನಾರದನು ನಿರ್ಭರ । ದೊಡನೆ ನಡೆತಂದಿರ್ವರನು ತಡೆ
ದೆಂದನೀತೆರದಿ ॥೧॥

ರಾಗ – ಮುಖಾರಿ । ತಾಳ—ಏಕ

ಓಹೋ ಇದೇನಿದು ಕೋಲಾಹಲವು । ಹೋರಟೆಯಬ್ಬರವು ॥ ಪ. ॥

ಓಹೊ ಇದೇನ್ನೃಪ । ಬಾಹುಜರಿರ್ವರು । ಆಹವಗೆಯ್ಯುವ । ಸಾಹಸವಚ್ಚರಿ
॥ ಅ. ಪ. ॥ ಧಾತ್ರೀಶರ್ ಕಾಡಲೇಕಿಂತು । ಶಸ್ತ್ರಾಸ್ತ್ರಗಳಾಂತು ಸ್ವಾರ್ಥವೃತ್ತಿ
ಯಲಿ ಬಯಲ ಭ್ರಾಂತು ಧೂರ್ತ ದುರಾತ್ಮರ ಕೃತ್ಯವಿದ್ಯೆ ಜನ । ಹತ್ಯೆಯನೆಸ
ಗುವ । ಬಾಳ್ತಿಯದೇಂ ಸುಡಿ । ಕ್ಷತ್ರ ಗುಣದಿ ನೃಪರುತ್ತಮ ಕೀರ್ತಿಯ ಮಿತ್ರ
ತ್ವವ ಬಿಡದೆತ್ತಲು ಬೇಕೇ ॥ ೧ ॥

। ವಾರ್ಧಿಕ ।

ಎಂದು ಭಯರಾಯರುದ್ರಿಕ್ತ ಕೋಪಾಗ್ನಿ ತಣಿ । ವಂದದಿಂ ನಯನೀತಿ
ತತ್ವಂಗಳರುಹುತಾ । ನಂದದಿಂದನ್ಯೋನ್ಯಭಾವದಿಂದಿರುವ ವೋಲ್ ಸಂಧಿಯಂ
ನೇರ್ಪಡಿಸುತ ॥ ವೃಂದಾರ ಕೇಂದ್ರಮುನಿಯ ಭ್ರಾಂಗಣವರ್ನೆರ । ಲಂದದಿಂ
ಸತ್ಯರಥನತಿವಿಭವದಿಂ ರಾಜ । ಮಂದಿರಕ್ಕೈತಂದು ಸತ್ಯಧರ್ಮಾಚರಣೆಯಿಂ
ದಾಳುತಿರ್ದ ನಿಳೆಯ ॥ ೧ ॥

ರಾಗ—ಸೌರಾಷ್ಟ್ರ । ತಾಳ—ತ್ರಿವುಡೆ

ಇತ್ತಲಾ ಸಾಲ್ವಾಖ್ಯನೊಂದಿನ । ಅತ್ಯಧಿಕ ವೈಭವದೊಳೋಲಗ । ವಿತ್ತ
ನಾಪ್ತರ ಪುರಪ್ರಧಾನರ । ಮೊತ್ತದೊಡನೆ ॥ ೧ ॥ ಗುರುಜನರ ಸಚಿವಾದಿ
ಭೃತ್ಯರ । ಪರಿಕಿಸುತಲಿಂತೆಂದನಿಳೆಯೊಳು । ಸರಿಯದಾರೆ ನಗವನಿಪಾಲರ। ನೆರ
ವಿಯೊಳಗೆ ॥೨॥ ಯೂರು ಸತ್ಯಾಧಿಕರು ಸಮಬಲರಾರು ರಾಜಾದಿತ್ಯನೆನ್ನನು ।
ಮೀರುವ ಸಮಬಲಾಢ್ಯರುಂಟೇ । ಧಾರಿಣಿಯಲಿ ॥ ೩ ॥ ಎನಲು ಭೃಗುಸುತ
ನೆಂದನವನಿಯೊ । ಳೆನಗೆ ಸಮಬಲರಿಲ್ಲವೆಂಬತಿ । ಘನ ಗರುವವೇಕೈ ಪ್ರತಿಷ್ಠಿತ
ಜನಪರಿಹರು ॥೪॥ ತಿಳಿಯದೇನು ವಿದರ್ಭ ದೇಶದೊಳಿಳೆಯನಾಳ್ವಾ ಸತ್ಯರಥ
ನೆಂಬ ಲಘುಮತಿಯುತಗಾರು ಸರಿ ದೊರೆ । ಬಲು ಭುಜರಲಿ ॥೫॥ ಏನಿದ
ಚ್ಚರಿ ಸತ್ಯರಥನೆಂ । ಬಾ ನರಾಧಿಪ ನಧಿಕನೇ ಛಡ । ಗೋಣ ಮುರಿದಟ್ಟುವೆನು
ಜವನಾ । ಸ್ಥಾನದೆಡೆಗೆ ॥೬॥ ಇಂತು ಸಾಲ್ವನು ವೀರ ಬಾಹುಕ । ಮಂತ್ರಿಯನು
ಕರೆದೆಂದನನಿಮಿಷ । ತಿಂತಿಣಿಯು ನಡುಗಲ್ಕೆ ಭೈರವ । ನಂತೆ ಕನಲ್ದು ॥೭॥

ರಾಗ – ಕೇತಾರಗೌಳ । ತಾಳ—ಝಂಪೆ

ಇತ್ತ ಕೇಳ್ ಮಂತ್ರಿವರ್ಯ । ಆಚಾರ್ಯ–ರೆತ್ತಿ ಪೇಳಿದ ವಾರ್ತೆಯ ।
ಸತ್ಯರಥ ನೃಪನಿಳೆಯೊಳು । ಎನಗಿಂತ–ಲತ್ಯಧಿಕನಂತೆ ಕೇಳು ॥೧॥ ಎನ್ನ ಸರಿ
ಮಿಗಿಲೆನಿಸುತ । ಬಾಳ್ವರಸ–ರಿನ್ನಿರಲು ಬಹುದೆ ಮಾತ್ರಾ ॥ ಸೈನ್ಯ ವೈದಲಿ

ಕ್ಷಿಪ್ರದಿ । ವೈದರ್ಭ-ನ್ನಿಕ್ಕಬೇಕು ಧುರದಿ ॥೨॥ ಕಳುಹಿಸ್ಯೆ ದೂತರನ್ನು । ಮುಂದಾಗಿ-ತಿಳಿಯಬೇಕವನಿರವನು । ಅಳವಿಗೊಡುವನೊ ಕಪ್ಪವ । ಕೆತ್ತವ ನೊ ಛಲವಾವ್ಯದೆಂಬ ನಿಜವ ॥೩॥ ಇಂತೆನಲಮಾತ್ಯವರನು । ರಾಜಾಜ್ಞೆಯಂತೆ ಕಳುಹಲು ಚರರನು ಶಾಂತ ಚಿತ್ತದಿ ಸಾರ್ದರು । ಸತ್ಯರಥ-ನಂತಿಕಕೆ ಭರದೊಳವರು ॥೪॥

ರಾಗ ಕೇದಾರಗೌಳ । ತಾಳ ಅಷ್ಟ

ದೊರೆಯಾಜ್ಞೆಯಂತೆ ದೂ । ತರು ಸತ್ಯರಥ ಭೂವಿೂ । ಶ್ವರನಾಸ್ಥಾನವನು ಸೇರಿ ॥ ಶಿರಬಾಗಿ ನಮಿಸುತ್ತ । ಕರಗಳ ಮುಗಿದು ನಿಂ । ದರು ಭಯಭಕ್ತಿಯೊಳು ॥೧॥ ಕರೆದೆಂದನಾ ಧಾತ್ರೀ । ಪರನು ದೂತರನಿಲ್ಲಿ । ಬರಲೇನು ಕಾರಣವು ॥ ಇರುವ ಠಾವೆಲ್ಲಿ ನಿ । ಮ್ಮರಸನಾರ್ ಕಾರ್ಯದ । ಭರವನು ಪೇಳಿರೆಂದು ॥ ೨ ॥ ಧರಣಿಪಾಲ ಸಾಲ್ವನೆ । ಮ್ಮರಸನು ರಾಜಾಜ್ಞೆ । ಯರುಹಲ್ಕೆ ತಂದೆವಿಲ್ಲಿ ॥ ನಿರತಕಪ್ಪವ ನಿತ್ತಾ । ದರದಲಿ ಸಾಮಂತ । ದೊರೆಯಾಗಿ ಬಾಳ್ವದೆಂದು ॥೩॥ ಕಪ್ಪವೀವೆಯೊ ಕಾದ । ಲಿರ್ಪೆಯೊ ಪೇಳ್ವುದೆಂ।ದೊಲ್ಪಿನಿಂದರುಹಲಾಗ ॥ ಕಪ್ಪಕಾಣ್ಕೆಯ ನೀವ । ನಿಷ್ಟಭನಲ್ಲೆಂದು । ಚಪ್ಪರಿಸಿದ ಭೂಪನು॥೪॥

| ಕಂದ ಪದ್ಯ |

ಇಂತೆನೆ ಸತ್ಯರಥಂ ಸಮ । ನಂತರದೊಳ್ ದೂತರೈದಿ ನಡೆದಾ ಕಥನಂ॥ ಶಾಂತಿಬಿಪಲ್ ಸಾಲ್ವಂ ತ್ರಿಪ್ರ । ರಾಂತಕನೊಲ್ಮೆಸಗುತಂದನಾ ಮಂತ್ರಿಯೊಳಂ ॥ ೧ ॥

ರಾಗ—ನಾದನಾಮ ಕ್ರಿಯೆ । ತಾಳ—ಅಷ್ಟ

ಮತಿವಂತ ಮಂತ್ರಿ ನೀ ಕೇಳ್ದೆಯೊ । ಸತ್ಯ-ರಥನುದ್ಧತಿಕೆಯ ನೀನರಿತೆಯೊ । ಹಿತದೊಳು ಕಪ್ಪವೊಪ್ಪಿಸನಂತೆ । ಇದಿ-ರಾಂತು ಹೋರಾಡಲಿರ್ದಪನಂತೆ ॥೧॥ ಸಿದ್ಧವಾಗಲಿ ಚತುರ್ಬಲಗಳು । ಸ-ನ್ನದ್ಧರಾಗಲಿ ಸುಭಟರ್ಕಳು । ಯುದ್ಧದಿ ಪರಬಲವಳಿಸುತ । ವಿಜ-ಯಧ್ವಜ ಹಾರಿಸಿ ಬರುದಿತ್ತ ॥೨॥ ಎನೆಲೆಂದನಾ ಮಂತ್ರಿವರ್ಯನು । ನಮ್ಮ-ಗಣಿಸದಾದನೆ ಕ್ಷುದ್ರಭೂಪನು । ಬಣಗುಭೂಪರಿಗಿಷ್ಟು ಬಲು ಹಾಗೆ । ನಮ್ಮ ಘನತೆ ಸುಡಲಿ ಬಾಳ್ವದು ಹೇಗೆ ॥೩॥ ನಡೆಯಲೆಮ್ಮಖಿಳ ಸೇನೆಯುಂ ಮನ್ನ । ಸದೆ-ಬಡಿದಿಕ್ಕಲಹಿತರ ಬಲವನ್ನ । ತಡೆಯಲೇಕೆಂದು ಹೂಂಕರಿಸುತ । ಖಡ್ಗ ಹಿಡಿದೆದ್ದನಾ ಮಂತ್ರಿ ಕನಲುತ ॥೪॥

ರಾಗ—ಶಂಕರಾಭರಣ । ತಾಳ—ಮಟ್ಟೆ

ಹೇಳಲೇನಜಾಂಡ ಬಿರಿವ । ಪೋಲು ಸಾಲ್ವನಾರ್ಭಟಿಸುತ । ಬೀಗ ಕೈತಂದ ಚಿಹ್ನ । ಬಲವನೆರಸುತ ॥ ಧೂಳಿಯೆರಚುತಾ ಕೃತಾಂತ । ನಾಳ್ಗಳಿನೆ ವಿದರ್ಭಪುರದಿ । ದಾಳಿಗೊಟ್ಟರಸುರಭಟರು । ಕಾಳುಕಪದದಿ ॥೧॥ ಧುರ್ಜಖಿಳರೀತೆರದಿ ಲಗ್ಗೆ । ಹತ್ತಿ ಸುತ್ತಿಸುಳಿದು ಪುರವ । ಮುತ್ತಿ ಧಾಳಾಧೂಳಿಗೈದು ರತ್ತಲಿತ್ತಲು ॥ ಆರ್ತನಾದವೆತ್ತು ರಾಜ । ಭೃತ್ಯರೈದಿ ಭಯವ ಬಿತ್ತಿ । ಸತ್ಯರಥನ ಪಾದಕೆರಗಿ । ಬಿತ್ತರಿಸಿದರು ॥೨॥

। ಭಾಮಿನಿ ।

ಚಿತ್ತವಿಪ್ಪದೆಮ್ಮರಿಕೆಯನು ಭೂ । ಪೋತ್ತಮನೆ ರಿಪುರಾಯರೆಂತಕ । ಭೃತ್ಯರೆನೆ ದಂಡೆತ್ತಿ ಬಂದಿಪರಖಿಳ ಬಲಸಹಿತ ॥ ಹತ್ತಿ ದುರ್ಗವನೊತ್ತಿ ಪುರಜನ । ಮೊತ್ತವನು ಬೆಬುತ್ತಲೈದಿದೆ । ವಿತ್ತ ನಿಮ್ಮಡಿಗಳುಪಲಿನ್ನೇನುಮದೊ ದುರ್ವಿಧಿಯ ॥೧॥

ರಾಗ ಭೈರವಿ । ತಾಳ—ಏಕ

ಇಂತೆನೆ ನೃಪನದ ಕೇಳ್ದು । ತ್ರಿಪ್ರ-ರಾಂತಕನಂದದಿ ಕನಲ್ದು ॥ ಶಾಂತಿಯದೇಂ ರಿಪುಗಳನು । ಭೂತ-ಸಂತತಿಗುಣಬಡಿಸುವೆನು ॥ ೧ ॥ ಬರಲೈಪಟುಭಟರೆಲ್ಲ । ನಿ-ರ್ಭರದಿ ಚತುರ್ಬಲವೆಲ್ಲ ಪರಬಲವನು ಸೊಪ್ಪರಿದು । ಯಮ-ಪುರಕಟ್ಟುತ ಪಡೆತಹುದು ॥೨॥ ಒಡನೆ ಮಹಾಬಲವೆಲ್ಲ ಬಂ-ದೊದಗೊದಲು ರಣಮಲ್ಲ।ಪಡೆಯೊಡನೈದಿದನತ್ತ।ನೆಲ-ನೊದೆದ್ಪೋಲ್ ಘೋರ್ಗುಡಿಸುತ್ತ॥೩॥

| ಕಂದ ಪದ್ಯ |

ಅನಿತರೊಳು ವೀರಬಾಹುಕ । ಘನರೋಷಮನಾಂತು ಮುಂದೈತರಲಾ॥ ಕ್ಷಣದೊಳ್ ಚಿತ್ರಧ್ವಜನಾ । ಧನುವಂ ಠೇಂಕರಿಸುತೆಂದನಾ ದನುಜನೊಳಂ ~~ಪಾರ್ಥನೆಂಬ ಬಿರುದ ನೀನು ವ್ಯರ್ಥ~~ ॥೧॥

ರಾಗ—ಭೈರವಿ । ತಾಳ—ಮಟ್ಟೆ

ಯಾರು ನೀನು ಘೋರಾಕೃತಿಯ । ತೋರುತಿರ್ಪವ । ಕ್ರೂರತನದಿ ಪುರವ ಮುತ್ತಿ । ಸೂರೆಗೈದವ ॥ ಶೂರ ಸಾಲ್ವನೃಪನಮಾತ್ಯ ವೀರ ಬಾಹುವ। ಚಾರಿತ್ರವನು ಬಲ್ಲೆಯೊ ನೀ । ನಾರು ಕೇಳ್ವವ ॥೧॥ ಸತ್ಯರಥನಮಾತ್ಯವರ್ಯ। ಚಿತ್ರಕೇತುವಾ । ಚಿತ್ರಚರಿತೆಯರಿವೆಯೊ ದು । ರಾತ್ಮದಾನವ ॥ ವ್ಯರ್ಥಗಳಿ

ಟಬು ಕಪ್ಪ । ವಿತ್ತು ಬಾಳ್ಗರ್ಃ ॥ ಶತ್ರುತನದೊಳೆಮ್ಮ ಗೆಲುವ । ಶಕ್ತರಿರುವ ರೇ ॥೨॥ ದುರುಳ ಕೇಳತ್ರಸೆವು ಕಪ್ಪ । ವೃರುವುತರಾಸ್ತ್ರದಿ ॥ ಬರಿದೆ ಮೃತ್ಯು ವಿಗೆ ತುತ್ತಾಗ । ದಿರು ವಿದ್ವೇಷದಿ ॥ ಗರುವೋದ್ರೇಕದಿಂದ ಪ್ರಾಣ । ತೊರೆಯ ದಿರು ಭಲಾ । ಧುರದೊಳೆಮ್ಮ ಗೆಲಿದು ಬಾಳ್ವ । ದೊರೆಗಳಾರೆಲಾ ॥ ೪ ॥ ಅನಿತು ಸತ್ತವಿರಲು ನೋಳ್ಪೆ । ನೆಮತ ಚಿತ್ರನು । ಧನುವ ಜೇಗ್ಯೆದು ಸುರಿದ। ಕಣೆಯು ಮಳೆಯನು ॥ ಕನಲ್ದು ವೀರಬಾಹು ತತ್ । ಕ್ಷಣದಿ ಮುರಿಯುತ । ಘನತರಾಸ್ತ್ರವೆಸೆದನಘವ । ನೆನಲು ಮಸಗುತ ॥೪॥

ರಾಗ—ಸೌರಾಷ್ಟ್ರ । ತಾಳ—ತ್ರಿವುಡೆ

ವೀರಬಾಹುವಿನಸ್ತ್ರಘಾತದಿ । ಧಾರಿಣಿಯೊಳೊರಗಲ್ಕೆ ಮಂತ್ರಿಯು । ಮಾರಪರನೆನೆ ಸತ್ಯರಥನುರಿ । ಕಾರುತೆಂದ ॥೧॥ ಧಿರುರೆ ದುಷ್ಟದುರಾತ್ಮನೆ ಮ್ಮೊ । ಪುರವ ಮುತ್ತುತ ಸಾಧುವರ್ಗವ । ನುರಿಸಿದತಿಪಾತಕಕೆ ಶಿಕ್ಷೆಯ । ತೆರುವೆನಿದಕೋ ॥೨॥ ಯೊರು ನೀಂಪಮ್ಮೆರಿ ಗಜರ । ಲ್ಯಾರು ನಮ್ಮಧಿಕಾರ ವರಿಯದೆ । ಮಾರರಿಪುವಿಂಗಾದರೆಮ್ಮೊಳು । ಹೋರಲರಿದು ॥೩॥ ಸತ್ಯಧರ್ಮ ದೊಳಾಳುತಿರಲೆ । ಮ್ಮತ್ತ ದಂಡೆತ್ತುವರೆ ಧರ್ಮಿಗ । ಳಿತ್ತಣದು ವಿದ್ರೋಹ ವೊ ಪರ । ವಾರ್ಥವರಿಯೆ ॥೪॥ ಕಪ್ಪಕಾಣ್ಕೆಗಳೊಡನೆ ರಾಜ್ಯವ । ನಪ್ಪಗೈವವ ಸರದಿ ಬಂದಿರೆ । ತಪ್ಪದಾವುದು ಕಾದಿ ಮಡಿವಾ । ದರ್ಪ ಸುಡಲ್ಕೆ ॥೫॥ ಕಪ್ಪವೀವೆವು ಶಸ್ತ್ರಮುಖದಿಂ । ದೊಪ್ಪಿಪೆವು ಯಮನೆಡೆಗೆ ಮುನಿದರೆ । ದರ್ಪ ಕಾರಿಯೆ ಬರಲಿ ರಿಪುಕುಲ । ಸೊಪ್ಪರಿವೆವು ॥೬॥ ಎಂದು ಕೋಪಾಟೋಪದಿಂ ದೊಣೆ । ಯಿಂದ ತೆಗೆದೆಚ್ಚನು ಮಹಾಸ್ತ್ರವ । ಮಂದಮತಿಯದ ತರಿದು ಪ್ರತಿ ಶರ । ವೃಂದವೆಸೆದ ॥೭॥ ಸತ್ಯರಥನುರಿಮಸಗುತಾ ಕದ । ನತ್ರಿಣೇತ್ರನ ತೆರದಿ ಶಕ್ತಿಯ । ನೆತ್ತಿ ಬಿಸುಟನು ದಿಗ್ಗಜಾವಳಿ । ತತ್ತರಿಸಲು ॥೮॥

॥ ಕಂದ ಪದ್ಯ ॥

ಇಂತಾಶಕ್ತಿಯ ಭರಮಂ । ತಾಂತಡೆಯದೆ ವೀರಬಾಹು ಮರಳಿದನಾಗ ಳ್ ॥ ಪಿಂತೆರಳಲ್ ಸಾಲ್ವಂ ಮಾ । ರಾಂತು ವಿಧರ್ಭಾಧಿಪತಿಯ ತಡೆದಿಂ ತೆಂದಂ ॥೧॥

ರಾಗ—ಭೈರವಿ । ತಾಳ—ಝಂಪೆ

ಯೊರು ನೀಂ ಸತ್ಯರಥ । ಧಾರಿಣಿಪನೇನೊ ಮದ । ವೇರಿ ನಿಂದ್ಯೆ ಸತ್ಯ।

ತೋರಲಾಪವದಿ ॥ ೧ ॥ ಯೊರಾದರೇಂ ಪುರವ । ಸೇರಿ ಬಂದಧಮರಿಗೆ । ತೋರಲಿರ್ದಪೆನು ಯಮ । ನೂರನೀಕ್ಷಣಕೆ ॥ ೨ ॥ ತಿಳಿಯದಾದ್ಯೆ ಸಾಲ್ವ । ನಳವ ಭೂಭುಜರೆಲ್ಲ । ತಿಳಿದಿರಲು ಸೋಸಾದಿ । ಗೆಲಿದು ಬಾಳ್ವಪೆನು ॥ ೩ ॥ ತಿಳಿಯದುಂಟೇ ದೈತ್ಯ । ರಳಿವ ದಾಸ್ಯದಿ ಮಾನ । ಕಳೆದುಳಿವ ರಾಯರ । ಗ್ಗಳಿಕೆ ಹೊಲ್ಲೆಹವು ॥ ೪ ॥ ಛಲವೇತಕೆನ್ನಾದ । ರಿಳೆಯುನಿತ್ತರೆ ಲೇಸು । ಬಲುಹ ತೋರ್ದರೆ ಮಾರಿ । ಬಳಗಕುಣಿಸುವೆನು ॥೫॥ ಇಳೆಯನಿತ್ತಪೆನೆ ಘನ । ಬಲು ಶಿಲೀಮುಖಗಳಿಂ । ಬಲವಿರಲು ಕೊಳ್ಳೆನುತ । ಹಿಲುಕ ತೆಗೆದೆಚ್ಚ ॥೬॥

ರಾಗ—ಮಾರವಿ । ತಾಳ—ಏಕ

ದೈತ್ಯಾಧಮನದ । ಕತ್ತರಿಸುತ ಮೇ । ಘಾಸ್ತ್ರವ ಸೆಳೆದೆಸೆಯೆ ॥ ಪೃಥ್ವಿಪನಾ ಪವ । ನಾಸ್ತ್ರದೊಳಬರ । ದತ್ತಲು ಹಾರಿಸಿದ ॥ ೧ ॥ ಮರುತಾಸ್ತ್ರವ ಬಿಡ । ಲುರಗಾಸ್ತ್ರದಿ ಮು । ತ್ತೆರಗಲು ಪಣಿಕರವ ॥ ಗರುಡ ಕಳೆಯಬಿದಿ । ಹರಿಯಲು ಪಾವಕ । ಶರವೆಚ್ಚನು ಸಾಲ್ವ ॥೨॥ ಉರಿಯುಗುಳಿತಲ್ಕೆ । ತರುವನ ಲಾಸ್ತ್ರವ ವರುಣಾಸ್ತ್ರದೊಳಳಿಸೆ ॥ ಬರಿದಾಗಲು ಬಲು । ಶರಗಳು ಗದೆಗೊಂ । ಡೆರಗಿದನಾಖಳನು ॥೩॥

॥ ಕಂದ ಪದ್ಯ ॥

ಮೃಡನೊಳ್ ಕೆಂಗಿಡಿಯುಗುಳುತ । ದಡಿಗಂ ಬಲ್ಗದೆಯನೆತ್ತಿ ಹೊಯ್ದೊ ಭರದಿಂ ॥ ಪೊಡವಿಪನೊರಗಲ್ ಧಾತ್ರಿಗೆ । ಬಿಡುಗಣ್ಣರ್ ಪೋಕ್ಯಮಪಥದಿ ಹಾಯೆಂದಳಲ್ದರ್ ॥೧॥

॥ ಭಾಮಿನಿ ॥

ಚಿತ್ತರಿಸಲೇನರಸನಂತ್ಯದೊ । ಳಸ್ತಮಿಸಲಾದಿತ್ಯನಾ ದಿನ । ಹೊತ್ತ ಚಿಂತೆಯೊಳೋಡಿದರು ಕಂಡೆಡೆಗೆ ಪುರಜನರು ॥ ಧೂರ್ತನಾಗಳೆ ಮಂತ್ರಿ ಮುಖ್ಯ ಸ । ಮಸ್ತರೊಡನುತ್ಸಾಹ ಚಿತ್ತದಿ । ಹತ್ತಿದನು ಭದ್ರಾಸನವನಾತೋ ದ್ಯನಾದದಲಿ ॥೧॥

ಸಾಂಗತ್ಯ । ತಾಳ—ರೂಪಕ

ಇತ್ತಲಾ ಪುರಜನ । ರಾರ್ತನಾದದೊಳತ್ತ । ಲಿತ್ತಲೈದುತ್ತಿರಲನಕ ॥ ಸತ್ಯರಥನ ಧರ್ಮ । ಪತ್ನಿಗೀವಾರ್ತೆಯು । ಬಿತ್ತರಿಸಿದರಬಲೆಯುರು ॥೧॥ ಹಿಡಿ ಲೆರಗಿದ ಬಾಳೆ । ಗಿಡದಂತೆ ಮೂರ್ಛೆಗೊಂಡೊಡನೆ ಸುಶೀಲೆ ಸ್ತ್ರೈತಿಯೊಂತು॥

ನಡುಗುತ್ತ ದುಕ್ಕದಾ । ಕಡಲೋಳಾಡುತ್ತ । ನಡೆದೆದ್ದಳರಮನೆಯಿಂದ ॥೨॥
ಪಟ್ಟಿದುಳಲಿ ಘೋರ। ಮಟ್ಟು ದುರಾತ್ಮರ । ದೃಷ್ಟಿಪಥಕೆ ಬೀಳದಂತೆ ॥ ಪಟ್ಟಣ
ಬಿಟ್ಟು ಕಂ । ಗೆಟ್ಟು ಸಾರ್ದಳು ಕಲ್ಲು । ಬೆಟ್ಟಗುಡ್ಡಗಳ ಹತ್ತಿಳಿದು ॥೩॥ ನಡೆ
ಯಲಾರ್ದಳೆ ಗರ್ಭ । ಕಡುಸಿರೆ ನವಮಾಸ । ಪಡದಿಯ ಕಲ್ಮುಳ್ಳುಗಳಲಿ ॥ ನಡೆ
ಗೆಟ್ಟು ಹಾಯೆಂದು। ಮೃಡನೆ ರಕ್ಷಿಪುದೆಂದು । ಕಡುಬಿಸುಸುಯ್ದಳಾ ಸುದತಿ ॥೪॥

ರಾಗ–ಶೀಲಾಂಬರಿ । ಆದಿ [ವಿನಯದ್ಮಾ ಪವನಜನೆ]

ಹರ ಹರ ಮಹಾದೇವನೆ । ಮೃತ್ಯುಂಜಯನೆ – ಸರುವ ಲೋಕಾಧೀಶ
ನೆ । ಮರೆತೆಯೊ ಭಕ್ತರನ್ನು । ದೈತ್ಯಾಧಮರ–ನೆರವಿಯ ಕಾಯ್ದುಯೇನು ॥೧॥
ಸತ್ಯಧರ್ಮಾದಿ ರಾಜ್ಯವ । ಪಾಲಿಸಲೇನು–ಮೃತ್ಯು ಬಂತಲ್ಲೊ ದೇವ । ಭರ್ತಾ
ರನಿರದ ಮೇಲೆ । ಜೀವಿಪ್ಪುದೇಕೊ–ಪೃಥ್ವಿಗೆ ಭಾರವಲ್ತೆ ॥೨॥ ಯಾವ ಪಾಪವ
ಗೈದೆನೊ । ಜನ್ಮಾಂತರದೊ–ಳಾವಳ ವಧೆಗೈದೆನೊ । ಈ ವಿಧ ವಿಧವತ್ವದಿ।
ದುರ್ಗತಿಗೆ ಬೀಳ–ಲೇವುದರಿಯೆ ಮನದಿ ॥೩॥ ಮೃತ್ಯುವೇತಕೆ ಬಾರದು। ಪತಿ
ಯೊಡನೇಕೆ – ನ್ನಾತ್ಮವು ಬಲಿಯೊಗದು । ಸತ್ತಪೆನೆನಲಮ್ಮೆನು । ಒಡಲೊಳು
ಗರ್ಭ–ಹೊತ್ತಿರಲೇಂ ಮಾಳ್ಪೆನು ॥೪॥ ನೇಣಲಿಕ್ಕಲೊ ಮಡುವ । ಹಾಯ್ವ
ನೊ ಮತ್ತೆ । ತಾನುಂಡಪೆನೊ ವಿಷವ । ಪ್ರಾಣಾರ್ಪಣವಗೈದರೇ । ಶಿಶುಹತ್ಯೆ
ಯ-ಸೂನತಪ್ಪದು ದೇವರೇ ॥೫॥

॥ ಭಾಮಿನಿ ॥

ಇಂತು ಚಿಂತಾಕ್ರಾಂತಳಾಗಿ ಪು । ರಾಂತಕನೆ ಕೈಗಾಯ್ವುದೆನುತಾ । ಕಾಂತೆ
ಗೋಳಾಡುತ್ತಲಿರಲಾ ಶುಭಮುಹೂರ್ತದಲಿ ॥ ಕಂತು ಹರನೊಲವಾಗಲಾ
ಮತಿ । ವಂತೆಯುದರಾಂತರದೊಳುದಿಸಿದ । ನಂತ ಗುಣಮಣಿ ಬಾಲಕನು
ಬಾಲಾರ್ಕನಂದದಲಿ ॥೧॥

ರಾಗ–ಕೇದಾರಗೌಳ । ತಾಳ ಅಷ್ಟ

ಏನೆಂಬೆನುದಯ ವಿ । ಭಾನುವಂತಿಹ ಶಿಶು । ವಾನನದಾ ಪ್ರಭೆಯ ॥
ಕಾಣುತಲೆತ್ತಿ ಕೊಂ । ಡಾನಂದಭಾಷ್ಪದಿ । ತಾನೆ ಮೈಮರೆತಳಾಗ ॥೧॥ ಹರನೆ
ಶಂಕರ ಮಹೇ । ಶ್ವರನಿಟ್ಟಿಯೊವ್ವುದೆ । ಮ್ಮರಸು ಪಟ್ಟವನೇರುವ ॥ ತರಳಗೀ
ವಿಧಿಯೆ ದು । ರ್ಧರ ಕಾನನದಿ ಹೆತ್ತು । ಪೊರೆಯಲೆಂತುಟೊ ತಿಳಿಯೆ ॥೨॥
ಎನುತ ಮನದಿನೊಂದಾ । ತನುವ ಮುದ್ದಾಡುತ । ತನಯಗೆ ಮೊಲೆಯೂ
ಡುತ ॥ ಮನದಾಸರವ ನೀಗು । ವನಕ ದಾಹದ ಬೇಗೆ । ಯನು ಸೈಸದಾಯ್ತೊ

ಕೆಗೆ ॥೩॥ ಎಲ್ಲಿಕ್ಕೊ ನೀರ್ದೊರ । ಕಲ್ಲಿಕ್ಕೊ ಹೊಳೆ ಹಳ್ಳ । ವೆಲ್ಲಿಕ್ಕೊ ಕೊಳನೆನುತ ॥
ಹಿಳ್ಳಿಯ ಮರದಡಿ । ಯಲ್ಲೊರಗಿ ಮೆಲ್ಲ । ಮೆಲ್ಲನೈದಿದಳತ್ತಲು ॥೪॥ ಕೋರಿ
ಕೊಂದೆಡೆ ನಡು । ದಾರಿಯೊಳ್ ಕಾಸಾರ । ವಾರಿಯನೀಂಟಲಾಗಿ ॥ ಘೋರನಾ
ಯ ಕಾಲು । ಜಾರಿದೊಡನೆ ಮೇ । ಲೇಳದಾಯ್ತೇಪೇಳ್ವನು ॥೫॥ ವಿಧಿಬರಹವ
ಮೀರ । ಲೆದೆಯುಂಟೆ ಗ್ರಾಹವೊಂ । ದಧಿಕ ಪೂರ್ವದ್ವೇಷದಿ ॥ ವಧಿಸಲು ಪಿಡಿ
ದೊಯ್ಯ । ಲೊದರಿದಳ್ ಖಗಮೃಗಾದಿಗಳೆ ಮರುಗುವಂತೆ ॥೬॥ ಅಯ್ಯೊ
ನಾನಿನ್ನೇನ । ಗಯ್ಯಲಯ್ಯಯ್ಯೊ ಹಾ । ಸಾಯ್ವುದೇ ನಿಶ್ಚಯವು ॥ ಅಯ್ಯೊ
ಹಾ ಶಿವನೆ ಕಂ । ದಯ್ಯನ ಕಾಯ್ವರಾ । ರಯ್ಯ ಎಂದೊರಲಿದಳು ॥೭॥ ಸವತಿ
ಮತ್ಸರದಿಂದು । ಭವಿಸಿದ ಗ್ರಾಹವಾ । ಯುವತಿಯ ನುಂಗಲಿತ್ತ ॥ ವಿವರಿಸ
ಲೇನ್ನೃಹಾ । ರವದಿಂದಲಳುತಿರ್ದ । ನವನೀತ ಸುಕುಮಾರನು ॥೮॥

॥ ಕಂದ ಪದ್ಯ ॥

ಮುನಿಗಳೆ ಲಾಲಿಪುದಾ ಪಾ । ಲ್ವಸುಳೆಯು ಗೋಳಾಡುತಿರ್ದ ಮಾ
ರ್ಗಾಂತರಕಾ । ಯುಸದಿಂ ನಡೆತಂದೀಕ್ಷಿಸು । ತುಸುರಿದಳಿಂತೆಂದು ಭೂಸುರಾಂ
ಗನೆಯೋರ್ವಳ್ ॥೧॥

ರಾಗ–ಸಾರಂಗ । ತಾಳ–ಅಷ್ಟ

ಹರನೆ ಏನಿದು ಚೋದ್ಯವು । ಸರ್ವಾಂಗ ಸುಂದರವಾದ ಹಸುಶಿಶುವು।
ಪರಿಪರಿ ಮೃಗಗಳು । ಚರಿಸುವ ವನದೊಳಗಿರಲೇನು? ಕಣ್ಬಗೆಗೋಳಪ ಸೋ
ಟವಿದೈಸೆ ॥೧॥ ಹೆತ್ತವಳಾರೊ ನೋಡೆ । ನಿರ್ಜನಸ್ಥಳ ಸುತ್ತಮುತ್ತಿಹುದು
ಕಾಡೇ । ಹೆತ್ತವರಿರಲು ಬಿ । ಟ್ಟೆತ್ತ ಹೋಹರೆ ಹೆತ್ತು । ವಿತ್ತುವಾಹರೆ
ದೈವೀ । ವೃತ್ತಿಯಿದಲ್ಲವೆ ॥೨॥ ಕೊಂಡೊಯ್ವ್ದು ಪೊರೆದಪೆನೊ । ಎಂದರೆ
ಶಂಕೆ–ಗೊಂಡಪುದೆಸಗಲೇನೊ । ಕೊಂಡೊಯ್ಯದಿರೆ ಪಾಪ ಬಿಟ್ಟರೆ ಪರಿತಾಪ।
ಉಂಡಪನ್ಯೈ ವನ್ಯ ದುಷ್ಟಜಂತುಗಳಿಲ್ಲಿ ॥೩॥ ಜಾತಿ ಯಾವುದೊ ಬಾಲನ । ವಿ
ಪ್ರನೊ ಕ್ಷತ್ರ-ಜಾತನೊ ಶೂದ್ರನೇನಾ । ನೀತಿಬಾಹಿರ ಕುಲಜಾತನಾದರೆ ಧರ್ಮ।
ಘಾತವಾಯ್ತೆವನ ಸಂಪ್ರೀತಿಯೊಳೊಯ್ದರೆ ॥೪॥ ಎನುತ ನಾನಾ ವಿಧದಿ । ವಿ
ಪ್ರಾಂಗನೆ–ಮನಮರುಗುವ ವೇಳ್ಯದಿ । ಮನುಮಥಾಂತಕನು ಭೂಸುರ ರೂಪ
ದಲಿ ಬಂದು । ವಿನಯದೊಳಾ ಉಮೆಯೊಡನೆಂದನೀಶರ ॥೫॥

॥ ವಾರ್ಧಿಕ ॥

ಮಾನವಂತೆಯ ಚಿಂತಿಸದಿರೀತನಭಜಾತ । ಹೀನನಲಾ ಪಾರ್ಥಿವಾತ್ಮ
ಜಂ ದುರ್ದಶೆಯೊ । ಈ ನಿರ್ಜನ ಸ್ಥಳದೊಳಿರಲಾಯ್ತು ಸುಚರಿತ್ರನಪ್ಪನ್ಯ
ಭವಿತವ್ಯದಿ ॥ ಸಾನುರಾಗದೊಳಾತ್ಮಭವನೆಂದು ಬಗೆದು ಸು । ಮ್ಮಾನದಿಂದೊ
ಯ್ದು ನಿಜ ತನುಜನಿಂದೊಡಗೂಡಿ । ಸಾನಂದದಿಂ ಕಾಯ್ದುಕೊಳ್ಳೆಂದು ಪೇಳ್ದು
ಪಿಂತಿರುಗಿದಂ ಪಾರ್ವನಾಗ ॥೧॥

ರಾಗ—ಕಾಂಭೋಜ । ತಾಳ—ಅಷ್ಟ

ಭೂಸುರನಂತೆನಲುಮೆಯುತಿ ಮುದದಿ। ಕೂಸನೆರಡು ಕೈಗಳಿಂದೆತ್ತಿ ಭರ
ದಿ । ಲೇಸುಮಹೇಶನ ಮಹಿಮೆಯಿದೆನುತ । ತೋಷದಿಂದೊಯ್ದಳು ಮುದ್ದಾ
ದಿಕೊಳುತ ॥೧॥ ನಡೆತಂದು ನಿಳಯದಿ ಜಾತಕರ್ಮವನು । ನಡೆಯಿಸಿದಳು
ಮತ್ತೆ ನಾಮಕರಣವನು । ಪಡೆದಾತ್ಮಜಗೆ ಶುಚಿವ್ರತನೆಂದು ಮತ್ತಾ । ಒಡಗೂ
ಡಿದಗೆ ಧರ್ಮಗುಪ್ತನೆಂದೆನುತ ॥೨॥ ಎರಡು ಮಕ್ಕಳನಕ್ಕರದೊಳೆತ್ತಿಕೊಂಡು।
ತಿರಿತಂದು ಪೊರೆದಳು ಪೊಂಪುಳಿಗೊಂಡು । ವರುಷವೇಳಾಗಲು ವಿಪ್ರರ ಮು
ಖದಿ । ನೆರವೇರಿಸಿದಳುಪನಯನವೃತ್ತಪದಿ ॥೩॥ ಕೊಡಿಸಿದಳ್ ಬ್ರಹ್ಮೋಪ
ದೇಶವ ಮತ್ತಾ । ಬಿಡದೆ ವೇದಾದಿ ಶಾಸ್ತ್ರವನೋದಿಸುತ್ತ । ಪಡೆನುಡಿ ತಪ್ಪ
ದಂತುಭಯ ಬಾಲರನು । ಕಡುನಲ್ಮೆಯಿಂದೋತು ಪೊರೆದಳಿನ್ನೇನು ॥೪॥

॥ ಭಾಮಿನಿ ॥

ಈ ತೆರದೊಳುಮೆಯಣುಗರನು ಸಂ । ಪ್ರೀತಿಯಿಂ ರಕ್ಷಿಸುತಲೊಂದಿನ।
ಜಾತರಿಂದೊಡಗೂಡಿ ಭಿಕ್ಷಾಪೇಕ್ಷೆಯಿಂ ಪೊರಟು ॥ ಭೂತಳದಿ ಸುಳಿದಾಡು
ತಾ ಮುನಿ । ನಾಥ ಶಾಂಡಿಲ್ಯಾಶ್ರಮದ ಮಹಿ । ಮಾತಿಶಯವ ನಿರೀಕ್ಷಿಸುತ
ನಡೆತಂದಳಾಸ್ಥಳಕೆ ॥೧॥

ಸಾಂಗತ್ಯ । ತಾಳ—ರೂಪಕ

ವರ ಮುನೀಶ್ವರನಾಗ । ಪರಮ ತತ್ವಾರ್ಥವ । ನರುಹುತ್ತಲಿರೆ ಶಿಷ್ಯ
ರಿಂಗೆ ॥ ಪರಿಕಿಸಿ ಭಯಭಕ್ತಿ । ಭರದಿಂದಲಾ ಮಾವ । ರೆರಗಿದಾ ಮುನಿಯ
ಡಿಗೆ ॥೧॥ ಮುನಿವರ್ಯನೆಂದನೊ । ಮ್ಮನದಿಂದ ಹರಸುತ್ತ। ಅಣುಗರೊಳೀತ
ನಾರ್ ನಿನ್ನ ॥ ತನುಜನಹುದೆ ಸತ್ಯ । ವನು ಬಲ್ಲೆಯೊಡರೆ । ಅನುಮಾನಿಸದೆ

ಪೇಳ್ದೆನುತ ॥ ೨ ॥ ಚಿತ್ತವಿಸ್ಸೆ ಮುನಿ । ಪೋತ್ರಮನಿವನ ಮ್ಮ । ಪೆತ್ತವ
ರಾರೊ ಸಾವರಿಯೆ ॥ ಎತ್ತಿತಂದೆನು ಕಾಡೊ । ಳತ್ತು ಬಾಯ್ಬಿಡುತಿರೆ । ಬತ್ತಲೆ
ಶಿಶುವಾಗಿರಲ್ಕೆ ॥೩॥ ಕಾಲಜ್ಞನಹ ಮುನಿ । ಪಾಲನೀತನ ಕುಲ । ಶೀಲವೆಲ್ಲವ
ವಿಸ್ತರಿಸುತ ॥ ಪಾಲಿಸೆನುತ ಪಾದ । ಧೂಳಿಯೊಂತೆರಗಲು ॥ ಶೀಲವಂತೆಯೊ
ಳೆಂದ ನುಡಿಯು ॥೪॥

ರಾಗ—ಕಲ್ಯಾಣಿ । ತಾಳ—ಅಷ್ಟ [ಯೂಕಿನಿತುಸುಕಂವಿರಿ]

ಕೇಳಮ್ಮ ಗುಣಶೀಲೆಯೆ । ಬಾಲನ ಕಥೆ – ಪೇಳುವೆನಾ ಸಾಧ್ವಿಯೆ ।
ಕೇಳಿದೆಯ ವಿದರ್ಭರಾಯನ । ಶೀಲಚರಿತೆಯ ಸತ್ಯರಥನಾ । ಸಾಲ್ವನಿಂಹತ
ನಾಗೆ ತಬ್ಬಲಿ । ಬಾಲನಾದನದೇನು ಚೋದ್ಯವೊ ॥೧॥ ಪತಿಯು ತಾನಳಿದ
ಹೊತ್ತು । ವನಾಂತರ-ಗತನಾದ ಮೇಲೆ ಹೆತ್ತು । ಸತಿಯು ದಾಹದೊಳಿಳಿಯೆ
ಸರಸಿಯ । ಪತಿಸಿತೆಲೆ ನೆಗಳೊಂದು ದ್ವೇಷದ । ವ್ಯತಿಕರದೊಳಾ ನಿನ್ನ ದೃಷ್ಟಿ
ಯ । ಪಥಕೆ ಗೋಚರನಾದನೀತನು ॥೨॥ ಮೊದಲು ಪಾಂಡ್ಯಾಧೀಶನು । ಪ್ರ
ದೋಷ ವ್ರ । ತದಿ ಮಗ್ನನಾಗಿರ್ದನು । ಮುದದೊಳೊಂದಿನ ಪೂಜೆಯಿಂದಿರೆ।
ಕದನಕ್ಕೈದಿದ ಶತ್ರುಸೇನೆಯ । ಸದೆದು ಬಂದುಳಿದಾ ಪ್ರಸಾದವ । ಮದಮುಖಿ
ತ್ವದೊಳಳಿದನಾತನು ॥೩॥ ಪೂಜಾಫಲವನೊಲ್ಲದೆ । ಭೋಜನಗೈದ – ವ್ಯಾಜ
ದಿಂದತಿ ಭಂಗದೆ । ಮಾಜಲಾಯ್ತಿನ್ನೇನು ಬಾಲಕ । ರೋಜೆಯಿಂ ಪಕ್ಷಪ್ರದೋ
ಷವ । ಸಾಜದಿಂದಾಚರಿಸಲತಿ ಶುಭ । ಯೋಜಿಸುವ್ಪದಿಷ್ಟಾರ್ಥ ಸಿದ್ಧಿಯು॥೪॥
ಒಡನೆ ಬಾಲಕರಿರ್ವರ । ಕರೆದು ತನ್ನ – ತೊಡೆಯನೇರಿಸುತವರ । ತಡವರಿಸಿ
ಮಂತ್ರೋಪದೇಶವ । ಕಡುಮಮತೆಯಿಂದಿತ್ತು ಪೂಜೆಯ । ಬಿಡದೆ ಪಕ್ಷಪ್ರ
ದೋಷವ್ರತವನು । ನಡೆಸಿರ್ಕೆ ನೀವೆನುತ ಹರಸಿದ ॥೫॥

ರಾಗ—ಕಮಾಚ್ । ತಾಳ—ರೂಪಕ [ಸಾಕು ಸಾಕು ಬೇಡ ಛಲಪದ]

ಎನಲಿಂತೆಂದಳುಮೆಯು ನಮಿಸುತ । ರೋಮಾಂಚಗೊಂಡು–ಮನದಿ
ಧನ್ಯಳಾದೆನೆನ್ನುತ । ಮುನಿವರೇಣ್ಯರಮೃತ ವಚನ । ಧನುಭವದಿ ಪುನೀತಳಾ
ದೆ । ನಣುಗನಿವನ ಚರಿತೆಯರಿಯ । ದನುಮಾನಿಸುತಲಿರ್ದೆನಯ್ಯ ॥೧॥
ಹಿಂದೆ ಗೆಯ್ದ ಕರ್ಮವಶದಲಿ । ನಿರ್ಗತಿಕನಾದ – ರಿಂದು ನಿಮ್ಮ ಮಂತ್ರ ಬಲ
ದಲಿ । ಹೊಂದಿತಾನಂದವೈಸೆ । ಚಂದದಿಂ ಪ್ರದೋಷವ್ರತಗ । ಳಿಂದಲಿಷ್ಟ
ಪೂರ್ತಿಯಾಗಿ । ಮುಂದೆ ಬಾಳಲಾಯ್ತು ಸುಖದಿ ॥೨॥ ಮರೆಯಲುಂಟೆ ತವ

ಸುನಾಮವ। ಶ್ರೇಯೋಭಿವೃದ್ಧಿ-ಗಿರುವ ಮಂತ್ರವಿತ್ತ ಪಾವನ। ಕರುಣಿಸುವ
ಪ್ರಣಿಯುನೆಂದು । ವರ ಯತೀಂದ್ರರಂಘ್ರಿಗೆರಗಿ । ತೆರಳಿದಳು ಬಾಲಕರ ಕೂಡಿ।
ಧರಣೀಸುರನ ಸತಿಯುಲ್ಲಿಂದ ॥೩॥

। ವಾರ್ಧಿಕ ।

ಮತ್ತೆ ಬಾಲಕರಿರ್ವರೊಂದಾಗಿ ವಾತೆಗೆರ । ಗುತ್ತ ಮುನಿಯುಪದೇಶ
ದಂತೆ ಪ್ರತಿಪಕ್ಷದೊಳ್ । ಪತ್ರಪುಷ್ಪಂಗಳಂ ತಿರಿತಂದು । ಸುಪ್ರದೋಷ ವ್ರ
ಮನಾಚರಿಸುತ ॥ ಭಕ್ತಿಯೊಳ್ ಶಿವಮಂತ್ರಮಂ ಬಿಡದೆ ಜಪಿಸುತ್ತ । ಲಕ್ಷ
ಯುಂದಾರಾಧನಂಗೆಯ್ದು ಪರಶಿವನ । ಪ್ರತ್ಯಕ್ಷವಾಗಿಸುತಲಿಷ್ಟಾರ್ಥ ಸಿದ್ಧಿಯ
ಪಡೆದು ಸುಖಿಮಿರುತಿರ್ದರು ॥

ರಾಗ—ಕಾಂಭೋದಿ । ತಾಳ—ಝಂಪೆ

ಇತ್ತಲವರೀತೆರದಿ । ಮೃತ್ಯು ಹರನೊಲವಿನಲಿ । ಚಿತ್ರಕಾಂತಿಯೊಳ
ಲಿಸುತ್ತ ॥ ಧೂರ್ತಸಾಲ್ವಾಖ್ಯತಾ । ನಿತ್ತನೋಲಗವ ಸುಧ । ಟೋತ್ತಮ
ಕೂಡಿ ಸಂಭ್ರಮದಿ ॥೧॥ ಅಷ್ಟರೊಳಗಿಳಿತಂದ । ನಷ್ಟ ಮೂರ್ತಿಯ ನೆನೆದು
ದುಷ್ಟನಿದ್ದೆಡೆಗೆ ನಾರದನು ॥ ದೃಷ್ಟಿಸುತ ಸಾಲ್ವನಿದಿ । ಗೊಟ್ಟು ಕರೆತಂದು
ನಿಜ । ಪಟ್ಟವನೇರಿಸುತಲೆಂದ ॥೨॥ ಏನಿದಚ್ಚರಿಯಮರ । ಮೌನಿವರ್ಯ
ರೆ ಬಂದಿ । ರೇನು ಕಾರಣ ಕಾರ್ಯವೇನು ॥ ಏನಿದ್ದರದುಪಬೇಕಾನು ಕೇಳ್ವ
ಯೆನ್ನ । ಸ್ಥಾನಮಾನಕೆ ಹಾನಿಬಂತೆ ॥೩॥ ವ್ಯರ್ಥವಾಯ್ತೈ ನಿನ್ನ । ಸತ್ವ ಸಾಹಸ
ಕೃತ್ಯ । ಸತ್ಯರಥನೆಂದ ಮೇಲವನ ॥ ಪತ್ನಿಯುದರದೊಳೊರ್ವ । ಪುತ್ರನುದಿ
ಸುತಲೀಗ । ಮೃತ್ಯುರೂಪದಿ ಬಳೆಯುತಿಹನು ॥೪॥ ಹೆತ್ತವರದಾರಿಲ್ಲ । ದತ್ತು
ಕೊಳುತಿರೆ ಪಾರ್ವ । ಳೆತ್ತಿ ಸಾಕಿದಳಸ್ತಬಲದಿ ॥ ಶಕ್ತನಾಗಿಹನೇಕ । ಚಕ್ರದ
ಶಾಂಡಿಲ್ಯ । ರಿತ್ತ ಮಂತ್ರೋಪದೇಶದಲಿ ॥೫॥ ಕೇಳಿದಾಗಲೆ ಪ್ರಳಯ । ಕಾ
ನೆನಬಾರ್ಥಟಿಸಿ । ಬೀಳುಗೊಟ್ಟಾ ಮುನೀಶ್ವರನ ॥ ಬಾಲಹತ್ಯೆಯಲಿ ಸುಖ।
ಬಾಳ್ವುದೆಂದೆಣಿಸಿ ಬರ । ಹೇಳಿದನು ನಿಜಸಹೋದರಿಯ ॥೬॥

ರಾಗ - ಭೈರವಿ । ತಾಳ—ಏಕ

ಬಾರೆಲೆ ಕುಂಭಸ್ತನಿಯೆ । ಮುನಿ - ಸಾರಿದುದೇನೆಂದರಿಯೆ । ವೈರಿಯ
ಸುತನೋರ್ವಾತ। ಪ-ಮ್ಮೇರಿ ಧುರಕೆ ಬಹನಿತ್ತ ॥೧॥ ಸತ್ಯರಥಾತ್ಮಜನಂತೆ।
ಧರ್ಮ-ಗುಪ್ತನೆನುವ ಪೆಸರಂತೆ। ಮೃತ್ಯು ಹರನ ಪೂಜಿಸುತ । ಶ್ರುತಿ

ಶಾಸ್ತ್ರದಿ ಪಳಗಿಹನಾತ ॥೨॥ ಏಕಚಕ್ರಕೀ ನಡೆದು-ವಿಪಿ-ಧಾಟಾರದಿ ಓಡಿಸೆಳೆ
ದು । ಜೋಕೆಯೊಳೊಟ್ಟಿಪುದೆನಗೆ । ಮು-ನ್ನೊಕುವೆ ವಾರಿಯು ಬಾಯ್ಗ ॥೩॥
ವಿನಲುಸುರೆಯು ವೈಪೆರೆದು । ಸಾ-ಲ್ವನೋಲ್ಗಾಣಿತಿಯನು ಪಡೆದು । ಅಣುಗನ
ಓಡಿಸಹನೆನುತ । ಘೋರಂ-ಕನೆ ಹಾಯ್ದಳು ಬೊಬ್ಬಿಡುತ ॥೪॥ ಇತ್ತಲಣುಗ
ರೊಡಗೂಡಿ । ವನ-ಸುತ್ತುತ ಶಿವನಡಿ ಬೇಡಿ । ಪತ್ರಪ್ರಸೂನಾದಿಗಳ । ಕೈ-
ಗೆತ್ತುತಲಿರ್ದರು ಬಹಳ ॥೫॥

। ಕಂದ ಪದ್ಯ ।

ದೂರದಿ ಕಂಡಾ ದನುಜೆಯು । ವಾರನ ರೂಪಾಂತು ಮೆರೆವ ಬಾಲರ
ಮುಖಮಂ ॥ ಘೋರಾಕಾರವ ಮರೆಸುತ । ಘೋರನೆ ತಳೆದಳ್ ಮನೋಜ
ನಾ ರತಿಯಂದಂ ॥೧॥

ರಾಗ—ಮಧ್ಯಮಾವತಿ । ತಾಳ—ತ್ರಿವುಡೆ

ಮುರುಳಿಯೊಗಳೆ ದರ್ಪಣದಿ ಮುಖ । ಸಿರಿಯ ನೋಡುತ ತಿಲಕ ತಿದ್ದು
ತ । ಕುರುಳ ಸರಿಗೊಳಿಸುತ್ತ ಸಿರಿಮುಡಿ । ಗಿರಿಸಿದಳು ಪೂಮಾಲೆಯ । ಚೆಂದ
ದಿಂದ ॥೧॥ ಜರಿಯ ಸೀರೆಯನುಟ್ಟು ವಿವಿಧಾ । ಭರಣಗಳ ತಾತೊಟ್ಟು ಕಂಕ
ಣ । ಚರಣದಂದುಗೆ ಗೆಜ್ಜೆ ಗಿಲಿರೆನೆ । ಸ್ಮರನ ಮದಮದ್ದಾನೆವೋಲ್ ನಡೆ ।
ತಂದಳೊಲಿದು ॥೨॥ ಕಣುಮನವ ಸೆಳೆದುಣ್ಬವಾ ಚೆಲು । ಕಣು ಸೆರೆಯೊಳೀ
ಕ್ಷಿಸುತ ಕುಂಭ । ಸ್ತನವನಪ್ಪುತ ನೆಲನಗೀಜುತ । ವಿನಯದಿಂ ನೃಪಸುತನೊಳು।
ನುಡಿದಳಿಂತು ॥೩॥ ಇತ್ತ ಬಾರೆಲೆ ತರುಣ ಪ್ರಾಯದ । ಚಿತ್ತಜನೆ ನಿನ್ನೊಡನೆ
ಮಾತೊಂ । ದೆತ್ತಲಿಹೆ ನೋಡಿತ್ತ ಹರುಷಿತ । ಚಿತ್ತದಲಿ ಮಧುರೋಕ್ತಿಯ ।
ನಾಡಬಾರೈ ॥೪॥

ರಾಗ—ಕಾಪಿ । ತಾಳ—ಅಷ್ಟ [ಗುಳುವರ್ಯ ಕೇಳೆನ್ನ ಮಾತ]

ನೋಡಿದಾಗಲೆ ಶುಚಿವ್ರತನು । ಪೇಳ್ದ - ರೂಢಿಪಾತ್ಮಜಗೆ ನೀತಿಯನು।
ಪೋಡಿಯಿದ್ದೈ ಕಾಡೋಳಾಡುವಂಗನೆಯರ । ನೋಡಲಾಗದು ನಾವು ಕೇಡಾಗ
ಲಿದೆ ಮುಂದೆ ॥೧॥ ಇನಿತು ಮಾತಾಡುತ್ತಲಿರಲು । ಬಲು-ಸನಿಹಕೈತಂದು
ಪೇಳಿದಳು । ಅಣುಗರೆ ನಿಮ್ಮ ಮುದ್ದಿನಮೊಗಸಿರಿ ನೋಡಿ । ಕನಿಕರಗೊಂಡು
ಕೇಳ್ವನಕ ಭೀತಿಯದೇಕೆ ॥೨॥ ಯಾರಯ್ಯ ನಿಮ್ಮ ಪೆತ್ತವರು। ಕಾಯ್ವ-ರಾರಿಲ್ಲಿ
ನಿಮ್ಮ ದಾವೂರು। ದಾರಿದ್ರ್ಯ ಹೇರಿ ನೀವೀರ್ವರು ಬನದಲ್ಲಿ । ಸೇರಿ ಹೊಗಳ

ನಾಯ್ಮು ಸಾಯುವುದೆಲ್ಲಿಗೆ ॥ ೩ ॥ ಅಮ್ಮ ಕಾಪಾಡಿಗಳಹೆವು । ನಿತ್ಯ-ಬೊಮ್ಮ ಚರ್ಯದಿ ಮೈವೆತ್ತಿಹೆವು । ನಮ್ಮನು ಪತಿವ್ರತ ಧರ್ಮಗುಪ್ತರು ಎಂದು । ಅಮ್ಮ ಕರೆಯುತಿರ್ಪಳೊಮ್ಮಾತು ಬೇಡೀಗ ॥೪॥

ರಾಗ—ಶಂಕರಾಭರಣ । ತಾಳ—ಏಕ

ಚಿಕ್ಕವರು ನೀವೇತಕಿಲ್ಲಿ । ದುಕ್ಕಪಡುವಿರೇಕೆ ಬನ್ನಿ । ಅಕ್ಕರೆಯಲಿ ಪೊರೆವೆ ಮನೆಯು । ಮಕ್ಕಳೊಂದಿಗೆ ॥೧॥ ಠಕ್ಕುಮಾತು ಬೇಡ ಶಿವನ । ರಕ್ಷೆಯಿರಲು ದುಕ್ಕವುಂಟೆ । ತಕ್ಕ ಪುಷ್ಪಗಳನರ್ಚಿಸುತ । ಸೌಖ್ಯವಿರ್ಪೆವು ॥೨॥ ಬಾಲರಿರ ನಿಮ್ಮಲ್ಪ ಬುದ್ಧಿ । ಕಾಲ ಕೆಳಗೆಬುಕ್ತಿ ದಿಟವು । ಮೇಲನರಿತು ಬನ್ನಿರೆನ್ನ । ತೋಳನಪ್ಪುತ ॥ ೩ ॥ ಪೇಳಲೇತಕಿಂತ ಪಾತ । ಕೇಳಲಮ್ಮ ಕೋಪಿಸುವಳು। ಶೂಲಿಯಡಿಯ ಮರೆತರುಂಟೆ । ಮೇಲಪಾಶೆಯು ॥೪॥ ದರ್ಪವೇಕೆ ಬಾರದಿರ್ದ । ರಪ್ಪಿ ಕೊಂಡೊಯ್ವೆನೀಗ । ದರ್ಪಕಾರಿ ಬರಲು ಬಿಡಿಸ । ಲಾರ್ಪನೇ ಛಲಾ ॥೫॥ ತಪ್ಪಿನುಡಿದು ಸಾಯಬೇಡ । ತೆಪ್ಪನೈದಿ ಮನೆಯ ಸೇರು । ಕಪ್ಪಗೊರಳನನ್ನು ಹಳಿಯ । ದಿರ್ಪುದುಚಿತವು ॥೬॥ ಬಣಗುಗಳೆ ನೀವೆನ್ನ ಬಲವ । ನಣಕಿಸುವಿರೆ ಲೇಸು ನಿಮ್ಮ । ತನುವ ಕಾಯ್ವರಾರೊ ನೋಳ್ಪೆ । ನೆನುತಾರ್ಭಟಿಸುತ ॥೭॥ ಕನಲ್ದು ಘೋರಾಕೃತಿಯನಾಂತು । ಘನಮಹಾಮೃತ್ಯುವೆನಲು। ಅಣುಗರಿದಿರು ನಿಂದಳು । ಲ್ಬಣ ವಿಕಾರದಿ ॥೮॥

॥ ಭಾಮಿನಿ ॥

ಕಡಿದರಣುಗರು ವಿಕೃತ ವಕ್ತ್ರದ । ಕೆಂಡ ಕಾರುವಲೋಚನದ ಮಸಿ । ಯುಂಡ ದೇಹದ ಕೋರೆದಾಡೆಯ ನೀಳ್ದ ಬಲ್ಮೊಲೆಯ ॥ ಚಂಡಿಕೆಯ ಪ್ರತಿ ಮೃತ್ಯುವಿನ ಮೈ । ಗೊಂಡು ರೌದ್ರಾವೇಶದಲಿ ದೋ । ರ್ದಂಡವನು ತೂಗುತ್ತ ಹೂಂಕೃತಿಗೈವ ರಾಕ್ಷಸಿಯ ॥೧॥

ರಾಗ—ಸೌರಾಷ್ಟ್ರ । ತಾಳ—ತ್ರಿವುಡೆ

ರಕ್ಕಸಿಯ ಘನಘೋರ ರೂಪವ । ನೀಕ್ಷಿಸುತ ಬಾಲಕರು ಭಯದಲಿ । ರಕ್ಷಿಸೈ ಶಿವನೆಂದು ಮರುಗಿದ । ರಾ ಕ್ಷಣದಲಿ ॥೧॥ ಹರನೆ ಗಂಗಾಧರನೆ ಪರಮೇ । ಶ್ವರನೆ ರಕ್ಷಿಸು ಬಾಲಕರ ಭಯ । ಹರಿಸುತ ಸುರೆಯನಿರಿದು ಲೋಕವ। ಪೊರೆವುದೆನುತ ॥ ೨ ॥ ಹರನು ತತ್‌ಕ್ಷಣವರಿತು ಗಿರಿಜೆಯೊ । ಳೊರೆದನಾ ಭೈರವಿಯ ರೂಪವ । ಧರಿಸುತಸುರೆಯ ತರಿದು ಬಾಲರ । ಪೊರೆವುದೆನುತ॥೩॥

ಎನೆ ಪಸಾದವೆನುತ್ತ ಭದ್ರಾ । ಸನವಿಳಿದು ಭೈರವಿಯ ರೂಪದಿ । ದನುಜೆಯಿದೆಗೆಯ್ತಂದಳಾ ಗಿರಿ । ತನುಜೆಯೊಗ ॥೪॥ ಎಲವೊ ರಾಕ್ಷಸಿ ನಿರ್ಗತಿಕರೆಂ । ದಸ ಬಗೆದೈ ಮಕ್ಕಳನು ತಡೆ । ಗೆಲಲನೆದೆಯನು ಸೀಳ್ದಪೆನು ತೋರ್ । ಬಲುಪನೀಗ ॥೫॥ ಯಾರು ನೀಂ ರಣಮಾರಿಯೊ ಬಲು । ಭೈರವಿಯೊ ಮೃತ್ಯುವಿನ ಮೂರಿಯೊ । ತೋರಲಿರ್ದಪೆನೆಲೆಗೆ ತೋಳ್ಬಲ । ಜಾರಲುಂಟೇ ॥೬॥ ಎಂದು ನೊಂದೆಕ್ಕಲನ ಗರ್ಜನೆ । ಯಿಂದ ಮುಂದಡ ಹಾಯ್ದು ಬರುತಿರ । ಲೊಂದು ಮುಷ್ಟಿಯೊಳೆರಗಿದಳು ಭರ । ದಿಂದಲಗಜೆ ॥೭॥

॥ ಭಾಮಿನಿ ॥

ಒಡೆದುದೋ ಬ್ರಹ್ಮಾಂಡ ಭಾಂಡವು । ಕೆಡೆದುದೋ ಭೂತಳಕೆ ನಭವೆನೆ। ಕೆಡೆದು ಬಿದ್ದುರುಳಲ್ಕೆ ನೀಲಾಚಲದವೋಲಸುರೆ ॥ ಒಡನೆ ಸೌಮ್ಯಾಕೃತಿಯೊಳಂಬಿಕೆ । ಹುಡುಗರನು ಮೈದಡವಿ ಹಿಂದಕೆ । ನಡೆದಳೇನೆಂದಪ್ಪುದೊ ಪರಶಿವನಾಮಹಾತ್ಮೆಯನು ॥೧॥

ರಾಗ—ಕೇತಾರಗೌಳ । ತಾಳ—ಅಷ್ಟ

ಯತಿಗಳೆ ಕೇಳಿರೊ । ಮತ್ತದಿ ಪೇಳ್ದಪೆನಂಬು । ಮತಿಯೊಂದುದಿನ ತನ್ನಯ ॥ ಪಿತನೆಡೆಗೈತಂದ । ಅತಿ ವಿನಯದಿ ಮನೋ । ವ್ಯಥೆಯ ಸೈರಿಸಲಾರದೆ ॥೧॥ ಗಂಧರ್ವಪತಿ ದ್ರುಮಿ । ಳೇಂದ್ರನು ತನುಜೆಯ । ಕುಂದಿದಾನನವ ನೋಡಿ ॥ ನೊಂದೆಯೇಕೆಲೆ ಮುದ್ದು । ಬಂದ ಚಿಂತೆಯ ಪೇಳ್ದು । ದೆಂದು ತಕ್ಕೈಸುತೆಂದ ॥೨॥ ಅರಿಯದೇನೈ ನಪ । ತರುಣಿಯರನುಭಾವ । ಹರಯಕೆ ಬಂದ ಮೇಲೆ ॥ ವರನಿಲ್ಲದೊಡೆ ದೇಹ । ಕೊರಗದಿರ್ಪುದೆ ಮರ । ನಿರದಲ ತಾಂಗದಂತೆ ॥೩॥ ವಿಧಿಯ ನೇಮವ ಮೀರು । ವದಟರಾರೌ ವ್ಯರ್ಥ । ವೆದೆಗುಂದಲೇಂ ಫಲವು॥ ಸದನದೊಳಿರು ಶುಭಾ । ಸ್ಪದದಿ ಮಾಳ್ಪೆನು ಲಗ್ನ । ಮದನಾರಿಯೊಲವಿನಲಿ ॥೪॥ ಪುರುಷ ಯತ್ನಗಳಿಲ್ಲ । ದಿರೆ ಫಲ ಬರ್ಪುದೆ । ಬರಿದೆ ಮಾಡದು ದೈವವು ॥ ಹಿರಿಯರ ಸುಕೃತದಿಂ । ಕಿರಿಯರೇಳಿಗೆಯೆಂಬು । ದರಿತ ವರ್ಗನುವುದೇನು ॥೫॥

। ಭಾಮಿನಿ ।

ತರಳೆ ನಡೆ ಚಿಂತಿಸದಿರೌ ಸಖಿ । ಯರ ಸಮೇಳದೊಳಂತಃಪುರದೊಳೆ । ಗಿರು ಸುಖದೊಳೆಂದೆನುತ ದ್ರುಮಿಳನು ಕಳುಹುತಾತ್ಮಜೆಯ ॥ ಹರನ ಕಾಂಬ

ಭೀಯೊಳಗಿರಬದ । ನಂತು ಸಖಿಯರು ಚೈತ್ರದುತ್ಸವ । ಭರದಿ ಹಿಗ್ಗುತಲಂ ಸುಮತಿಯೊಡನೆಂದರೀಶೆರದಿ ॥೧॥

ರಾಗ—ಜುಂಜೋಟಿ | ತಾಳ—ರೂಪಕ [ಆನಂದಸುಖಿ ಸುಂದರಾಂಗಿ]

ಬಾ-ಬಾರೊ ಸುಮತಿಯಂಶುಮತಿ । ವಾರಿಜಾಂಬಕಿ । ಸಾರಿ ವನ ವಿಹಾರ ಗೈವ । ಮಾರನಾಸಖಿ ॥ ೧ ॥ ಬಿ-ನೆಂಬೆವಾ ವಸಂತೋತ್ಸವದಾ । ರಂಭದುತ್ಸವ । ಅಂಬುಜಗಳ ಜೇಂಬುಳುಗಳ । ಜಂಭದಾರವ ॥೨॥ ನಾ-ನಾ ಪ್ರಸೂನ ನೋಡಬಾ ನ। ವೀನ ದೃಶ್ಯವ । ಮಾನಸದದು। ಮ್ಲಾನ ಕಳೆವ।ಗಾನ ಕೇಳುವ ॥೩॥ ರಾ-ಕೇಂದುಮುಖಿ । ಆತ್ಮಸಖೀ । ಚೆಂದವಾಯ್ತಲೆ । ಬೆಂದ ಹೃದಯಕಿಂದು ಮಹಾ । ನಂದವಾಯ್ತಲೆ ॥೪॥

ಕುಸುಮ ಷಟ್ಪದಿ | ಅಷ್ಟ ತಾಳ

ಇಂತೆನುತಲಂಶುಮತಿ ।ಸಂತಸದಿ ಗೆಳತಿಯರ। ಪಂಕ್ತಿಯೊಡಗೂಡಿ ವನ ವನಗಳಲ್ಲಿ ॥ ಶಾಂತಿರಿಮ ಕುಸುಮಗಳ । ನಾಂತು ತಂಬೆಲರೊಳನು । ಶಾಂತಿ ಯಿಂದಿಳಿದಳಾ ಜಲಕೇಳಿಗೆ ॥೧॥

ರಾಗ—ಸುರಟಿ । ತಾಳ—ಏಕ

ಆಡಿದರಬಲೆಯರು । ಜತೆಜತೆ – ಗೂಡುತ ಮತ್ತವರು । ಆಡಿದರಾ ಜಲಕ್ರೀಡೆಯ ಕಣ್ಬಗೆ । ಗೂಡುತ ಕುಣಿಕುಣಿದಾಡುತ ಹಾಡುತ ॥೧॥ ನಗು ಮೋರೆಯನೆತ್ತಿ । ಸೀರೆಯ-ನುಗಿದೊಮ್ಮೆಗೆ ಸುತ್ತಿ । ನೆಗಪುತ ಕೈ ಕೈ ಬಿಗಿ ಯುತ ಮೆಲು ಕುಚ । ಯುಗಳವನಪ್ಪುತ । ಜಿಗಜಿಗಿದಾಡುತ ॥ ೨ ॥ ಮೊಗ ಮೊಗ ಮುದ್ದಿಡುತ । ಜೀಕೊಳ-ವಿಗಳಿಂ ಚಿಮುಕಿಸುತ । ಲಗು ಬಿಗು ಜಲ ಗಿಲ । ನುಗುಳುತ ಜಗುಳುತ । ತೆಗೆ ಬಗಿಯೆನುತೂರ್ಮಿಗಳಿಂ ನೆಗಳುತ ॥೩॥

ಸಾಂಗತ್ಯ | ತಾಳ—ರೂಪಕ

ಇಂತು ಜಲಕ್ರೀಡಾ। ಭ್ರಾಂತಿಯಿಂದನಿಬರೋ। ರಂತಿರಲಾವನಾಂತರದಿ॥ ಕಂತು ಪರನ ಭಕ್ತಿ । ಯೊಂತು ಸಾಗುತಲಿರ್ದ । ರಂತಿರ್ದರಣುಗರು ಮುಂ ದೆ ॥ ೧ ॥ ತ್ವರಿತದಿ ಶುಚಿವ್ರತ । ತರುಣೀವರ್ಗವ ನೋಡಿ । ಕರೆದೆಂದನಾ ನೃಪಾತ್ಮಜನಾ ॥ ಪರಿಯದಿರತ್ತ ದು । ರ್ಭರ ನೋಟವಿಪುದಲ್ಲಿ । ಪರವಶನಾ ಗದಿರೆನುತ ॥೨॥ ಯಾವ ನೋಟವೊ ನೋಡ । ಲಾವ ದೋಷವೊ ದೃಷ್ಟಿ । ದೇವ ಕೊಟ್ಟಿಹನೇಕೆಂದರಿಯೋ ॥ ಕೋವಿದನಿರಲು ಸ್ವ । ಭಾವ ಬೇರಹುದೆ

ಸ । ದ್ಭಾವದಿ ನೋಡಿ ಬಹೆನಯ್ಯ ॥೩॥ ಬ್ರಹ್ಮಚರ್ಯದೊಳಿರೆ । ಉಮ್ಮಸ್ಸಿಂ ಪಳೆ ನಾವ್ । ದುರ್ಮಾರ್ಗದಲಿ ಸಾಗಬಹುದೆ ॥ ಬ್ರಹ್ಮ ಕುಲಜನಾಗಿ । ಧರ್ಮ ತಪ್ಪೆನು ನಿನ್ನ । ಧರ್ಮವೆಂತಿಹುದೊ ನಾನರಿಯೆ ॥೪॥ ಬಾರತ್ತ ಹೋಗಿ ನಾ । ಬಾರೆ ನಿನ್ನೊಡನೆ ಮುಂ । ದೋರುವ ಹಮ್ಮರನಡಿಯ ॥ ಸೇರಿರ್ಪೆನೆಮ ಹಿಂ । ಜಾರಲಾ ಶುಚಿವ್ರತ । ಸಾರಿದನರಮಗನಾಚೆ ॥೫॥ ಒಡನೆ ಸ್ತ್ರೀಯರ ಮೊತ್ತ । ಪೊಡವೆಯುಡಿಗೆಯೊಂತು । ನಡೆನೋಡುತಿರೆ ನೃಪಸುತನು॥ ನಡುವಿ ದನಾ ತಾರಾ। ಗಡಣದೊಳ್ ಶಶಿಯಂತೆ । ಬೆಡಗಿ ನಿಂದಿರುವಂಶುಮತಿಯ॥೬॥

ರಾಗ—ಕಾಪಿ | ತಾಳ—ಅಷ್ಟ (ಇವಳಾವ ಲೋಕದ ಸತಿಯೋ)

ತರುಣಿ ನೀನಾರು ಪೇಳಿತ್ತ । ನಿನ್ನ-ಪರಿಕಿಸಲಾಶ್ಚರ್ಯವಾಯ್ತು ನೋ ಡಿತ್ತ ॥ ಪ. ॥ ಮೋರೆ ನೋಡಲು ಚಂದ್ರನಂತೆ । ನಗು-ಬೀರುವ ತುಟಿಗಳ ರುಣ ಬಿಂಬದಂತೆ । ತೋರುವಕ್ಷಿಗಳಬ್ಜದಂತೆ । ಪೃಥು-ಕಾರುತಿರ್ಪವು ಸರ್ವಾಂ ಗಗಳು ಸಿರಂತೆ ॥೧॥ ಯಾರು ನೀಮಾನವಾಂಗನೆಯೊ । ಮೋ-ಹಾರು ದೈತ್ಯಾಂ ಗನೆಯೋ ಸುರಾಂಗನೆಯೋ । ಮಾರನ ರತಿಪ್ರತಿಕೃತಿಯೋ । ಭವ್ಯಾ – ಕಾರ ದೊಳಿಹ ಗಂಧರ್ವ ಕನ್ನಿಕೆಯೊ ॥ ೨ ॥ ಎನಲುನಾಣ್ಚುತ ಶಿರವಾಗಿ । ಸಖೀ– ಜನರ ಹಿಂದಿಕ್ಕಿ ಮನದ ಶಂಕೆ ನೀಗಿ । ಮನುಮಥಾಸ್ತ್ರಕೆ ಮಾನನೊಂದು । ಮೃದು-ಧ್ವನಿಯೊಳೆಂದಳು ಸರಸದ ಸುಧೆಗರೆದು ॥ ೩ ॥

ಕೋರೆ । ಏಕ—ತಾಳ

ಚಿತ್ತವಿಸೈ ಪು । ಣ್ಯಾತ್ಮನೆ ಗಂಧ । ರ್ವಾತ್ಮಜೆನಾ ಗಂಧರ್ವರಲಿ ॥ ಉತ್ತ ಮನಹದ್ರುಮಿ । ಳಾಖ್ಯನ ಸುತೆ ಪೆಸ । ರೆತ್ತಿಹೆನಂಶುಮತಿಯೆನುತ ॥೧॥ ಕನ್ನಿ ಕೆಯೆನ್ನ ಮಾ । ಹೋನ್ನತಗೊಪ್ಪಿಸ । ಲೆಣ್ಣಿಸಿಹನು ಪಿತನೊಳ್ಮನದಿ ॥ ಮನ್ಮಥ ನಸ್ತ್ರಕೆ । ಬನ್ನ ಬಡುತ ಸುಖಿ । ಪನ್ನರಸುತ ಬಂದಿಹೆನಿತ್ತ ॥೨॥ ಏನೆ ಹರುಷದಿ ನನೆ । ಗಣೆಗಳುಕುತಲಾ । ಜನಪಾತ್ಮಜನೆಂದನು ಭಳಿರೆ । ತ್ರಿಣಯನ ದಯೆ ಯಿಂ । ಗೇಣಪಕ್ಕಿಗಳಂ । ತನುಭವಿಸುವ ದಿನ ಬಂತೆನುತ ॥೩॥ ವಿಧಿಕೂಡಿಸಿತೆ। ಮ್ಮದೆಗಳನಾದರು । ಮದುವೆಯು ಶ್ರೇಯಸ್ಕರವೈಸೆ ॥ ಅದರಿಂ ಪಿತನೊಡ । ನುದಯಕೆ ಬಂದಪೆ । ನಿದಿರಾಗಿರಿ ಎಂದುಸುರಿದಳು ॥೪॥

ರಾಗ—ಸೌರಾಷ್ಟ್ರ | ತಾಳ—ತ್ರಿಪುಟೆ

ಇಂತು ಸರಸದೊಳಿರಲು ಸಾಲ್ವನ । ಮಂತಣದೊಳಿರುತಿರ್ದನಾ ದು । ರ್ದಾಂತನೆಂಬ ಕುಳಿಂದಕನುವಿಪಿ । ನಾಂತರದಲಿ ॥೧॥ ಶಬರ ಪಡೆಯೊಡಗೂಡಿ

ಟೀಟಿಯು । ರಭಸದಿಂ ನಡೆತಂದನಾ ವನ । ಕಟುಲರನು ಕೊಂಡೊಯ್ದು ಕಡದಿಂ। ಪ್ರಬಲನಾಗಿ ॥ ೨ ॥ ಎಲ್ಲಿದರೊ ಹುಲುಕುನ್ನಿ ಬಾಲಕ । ರೆಲ್ಲಿದರೊ ಭೂಸುರ ನೃಪಾತ್ಮಜ । ರೆಲ್ಲಿಯುಡಗಿದರೊಯ್ದು ತೋರ್ಜಿನು । ಸಾಲ್ವನಡಿಗೆ ॥೩॥ ಕಂಡ ಪಾ ದುರ್ದಾಂತ ನಾವಟು। ಮಂಡೆಬಾಗಿಸಿ ಮಂಡಿಸಿದ ಬಗೆ । ಕೊಂಡು ಓಡಿದ್ದೊ ಯ್ದು ಪೆಸಿಸುತ ಮುಂ । ಕೊಂಡು ಬಂದ ॥೪॥ ಬರುವ ದುರುಳನ ಕಂಡು ಭೂ ಸುರ । ತರಳನಯ್ಯೋ ಧರ್ಮಗುಪ್ತನೆ । ಪುರಹರನೆ ಹಾಯೆಂದು ಮರುಗುತ। ಧರಣಿಗೊರಗೆ ॥೪॥ ಗೆಳೆಯನಾರ್ತ ಧ್ವನಿಯುನಾಲಿಸಿ । ಗಳಲನ್ಯೆತರೆ ಧರ್ಮಗು ಪ್ತನು । ಗಳಸಿತ್ಯೆ ಗೆಲವೆಂದು ವಿಳನ । ಗ್ಗಳಸಿನಿಂದ ॥೫॥

ರಾಗ—ಮಾರವಿ । ತಾಳ—ಏಕ [ಅಗಸೂತೆ ಕೇಳಾಸುಗಸಬ]

ಸ್ಮರಹರನರಿತಾ ಭರದಿಂ । ವೀರನ । ಕರೆದಟ್ಟಲು ಪಲು ಮೊರೆಯುತ್ತ ಕಂಗಳೊ । ಉರಿಯುಗುಳುತ ಲಯ ಹರನಟ್ಟಾಸದಿ । ಮರುತಗತಿಯ ಮಿಕ್ಕು ರುತರ ವೇಗದಿ—ಬಂದನಂಮ ॥ ೧ ॥ ಯೊರೆಲ ಧೂರ್ತ ಭಿಕಾರಿ ಕುಳಿಂದನೆ । ಬಾರಿತ್ತಲೆ ಸುಕುಮಾರರ ನೀಳ್ವಾ । ಬಾರಿ ಭುಜದ ಬಲ ತೋರೆನ್ನೊಳು ರಣ। ಮಾರಿಯನಣಲಿಂ । ಗೇರಿಪೆನೆಂದ । ವೀರನಂದು ॥೨॥ ಥಡ ಥಡ ನೀನಾರ್ತ ದೆದಪೆಯೇಕೆಲೊ । ನಡೆಯುತ್ತಲೆ ಕೆಂಜೆಡೆಗಳ ಕೆದರುತ । ಹುಡುಗರ ಪಕ್ಷದಿ ನುಡಿದಪೆಯೊದರೆ । ಹೊಡೆದುರುಳಿಪೆನೆಂದೊಡನಿದಿರಾದ—ಶಬರನಾಗ ॥೩॥

। ಭಾಮಿನಿ ।

ವೀರನಾಗಳೆ ದಂಡಧರನಂ । ತಾರುಭಟಿಸುತ ಜಡಿದು ಖಂಡೆಯ । ಹಾರಿ ಸಜ್ಜಾ ಶಬರನೆದೆಬಿರಿದುರುಳೆ ಭೂತಳಕೆ ॥ ಘೋರನಿರ್ವರು ಕಾಣುತೀಪರಿ । ಮಾರ ಮಥನನ ಮಹಿಮೆಯೆನ್ನುತ । ಸಾರಿ ಪೇಳ್ದರು ನಡೆದ ಹದನವನೆಲ್ಲ ತಾಯೊಡನೆ ॥೧॥

ರಾಗ—ಭೈರವಿ । ತಾಳ—ಏಕ [ಸಖಿಯರು ಕೇಳಿರೀಗ ಹಯಣಗೈವ]

ಮುನಿಗಳೆ ಕೇಳಿರಿತ್ತ । ದ್ರಮಿಳನೆಂಬ—ಘನ ಗಂಧರ್ವನ ಚರಿತ । ತನುಜೆಗೊಪ್ಪುವ ವರನು । ಎಲ್ಲಿದನೆಂದು — ಮನದಿ ಚಿಂತಿಸುತಪನು ॥೧॥ ಶಕ್ರರಾರ್ ತ್ರಿಜಗದೊಳು । ವಿಧಿಯ ನಿಶ್ಚಿ—ತಾರ್ಥವರಿತು ಪೇಳಲು । ಗೋತ್ರಜಾಪತಿಯಲ್ಲದೆ । ಬೇರಿಲ್ಲವೇ—ದತ್ತ ಸಾಗಿದನಿರದೆ ॥೨॥ ಪ್ರಾರ್ಥಿಸುತಿರೆ ಮನದಿ ।

ಭಯಭಕ್ತಿಯೊ—ಳಾತ್ರಿನೇತ್ರನು ದಯದಿ । ಪ್ರತ್ಯಕ್ಷನಾಗುತಲಿ । ಪೇಳ್ದೋದಯ—ವಾಯ್ತೆಂದನೊಲವಿನಲಿ ॥೩॥

ರಾಗ—ನವರೋಜು । ತಾಳ—ಏಕ

ಚಿಂತಿಸಬೇಡೆಲೊ ದ್ರಮಿಳ । ಧೃತಿ—ಯೊಂತಿರು ಪುಣ್ಯದ ಕಾಲ । ಬಂತೈ ಯಂಶುಮತಿಯ ಗುಣಕೊಪ್ಪುವ । ಕಂತುವಿನಂತಹ ಕಾಂತನಾದ ಗಡ ॥೧॥ ಸತ್ಯರಥಾತ್ಮಜನಹನು । ಧರ್ಮಗುಪ್ತನೆನ್ನುವ ವರನು । ಶತ್ರುಗಳಿಂ ಪಿತೃ ಮಾತೃವು ಗ್ರಾಹ । ಗ್ರಸ್ತರಾಗೆ ವಿಧಿಯಿತ್ತಿಹುದವನ ॥೨॥ ಪಾರ್ವತಿಯೊಶ್ರಯವೆತ್ತು । ಮುನಿ—ಶರ್ವಗ ಸೂಕ್ತಿಯನಾಂತು । ಪೂರ್ವಭವದ ಭವ ನೀಗುತ ಪ್ರದೋಷ । ವ್ರತದಲಿ ತತ್ಪರನಾಗಿರ್ಪನು ॥ ೩ ॥ ಕರಗದಿರೈ ತನುಮನದಿ । ಸ್ವಯಂ—ವರಿಸಿಹರಿರ್ವರು ತಟದಿ । ಪರಿಣಯದೊಡನಶ್ವಾದಿ ಸುವಸ್ತುಗ । ಳೆರೆಯೈ ಧಾರೆಯ ಧರೆಯೊಳ್ದಪನು ॥೪॥

॥ ಭಾಮಿನಿ ॥

ತಡೆಯದಿರು ನಡೆಹೋಗು ಸಂತಸ । ಕಡಲೊಳಾಳ್ದಪೆಯೆನಲು ದ್ರಮಿಳನು । ಮೃಡನ ಪದಕಭಿವಂದಿಸುತ ಬೀಳ್ಕೊಂಡು ನಡೆತರಲು ॥ ಸಡಗರದೊಳಿದಿರೆದ್ದು ಕೈಮುಗಿ । ದಡಿಗೆರಗುತಿಂಶೆಂದಳಾ ಯತ । ಜಡಜ ಲೋಚನೆಯಂಶುಮತಿಯತಿ ನಯದಿ ಪಿತನೊಡನೆ ॥೧॥

ರಾಗ – ಸೌರಾಷ್ಟ್ರ । ತಾಳ ಅಷ್ಟ [ಜೀಯ ಲಾಲಿಸು ವೀರನತಿಕಾಯ]

ಧನ್ಯಳಾದೆನು ಪೂರ್ವಪುಣ್ಯ ಸಫಲವಾಯ್ತು । ಅಪ್ಪ ಕೇಳು । ಇಚ್ಛಾ—ಪೂರ್ಣವಾಯ್ತೆನಗೊಪ್ಪುವನ್ನನೊಲಿದನಲ್ತೆ—ಅಪ್ಪ ಕೇಳು ॥೧॥ ಜಲಕೇಳಿಗಾಗಿ ಪೂಗೊಳದೆಡೆಗೈದಿರೆ—ಅಪ್ಪ ಕೇಳು । ಸ್ನೇಹ—ಗಳಿಸಲಾಯ್ತುಂ ಗಜನೊಲು ಚೆಲ್ವ ಪುರುಷನ - ಅಪ್ಪ ಕೇಳು ॥೨॥ ಪೃಥ್ವಿಪಸುತ ಧರ್ಮಗುಪ್ತನೆಂಬವನಂತೆ—ಅಪ್ಪ ಕೇಳು । ಮಾ-ತಿತ್ತಿಹೆ ನಾವಿಬ್ಬರತ್ತ ಹೋಗುವ ಬನ್ನಿ—ಅಪ್ಪ ಕೇಳು॥೩॥ ಒಳ್ಳಿತೊಳ್ಳಿತು ವರನೆಲ್ಲಿಹನೋ ಕಾಂಬ- ಮಗಳೆ ಕೇಳು । ಹರ—ನೆಲ್ಲ ಪೇಳ್ದನ ದನೊಳ್ಳೆ ಘಟನೆಯಿದು—ಮಗಳೆ ಕೇಳು ॥೪॥ ಎಂದಿರ್ವರೊಂದಾಗಿ ಬಂದರಾ ಸ್ಥಳಕಾಗಿ—ಕೇಳಿರೆಲ್ಲ। ನೃಪನಂದನನೆಂದಂತೆ ಬಂದಿದಿರ್ಗೊಂಡನು—ಕೇಳಿರೆಲ್ಲ॥೫॥

ರಾಗ—ಶಂಕರಾಭರಣ । ಆದಿ [ಇತ್ತ ಕೇಳುತ್ತರಾನಂದನಾ]

ಬಾರೊ ಬಾರಿತ್ತ ನೃಪಜಾತನೆ । ಮಾರಾ—ಕಾರನೇ ಸಂಗರ ಧೀರೋ

ದ್ದಾ ರನೇ ॥ ಪ. ॥ ಒಪ್ಪಿದೇ ನಾನಿಮ್ಮ ಧರ್ಮನೀತಿಗೆ । ಲೇಸಪ್ಪದಯ್ಯ ಸತ್ಯ ಧರ್ಮದೊಂದಿಗೆ । ತಪ್ಪಲುಂಟೆ ಜಗದಿ ದೈವವೊಲಿಗದ । ನಿಮ್ಮ — ಒಪ್ಪಿತಕ್ಕೆ ಮೆಚ್ಚಿನಿವೆ ಸರ್ವವ ॥೧॥ ಪೇಳಲೇಕಿನ್ನಂಶುಮತಿಯುದ್ವಾಹಕೆ । ಕಾಲ_ವೇಳೆ ಯರಿತು ಬನ್ನಿರೆಮ್ಮಾವಾಸಕೆ । ಜಾಲವಿಲ್ಲ ಹೋಗಿ ಬನ್ನಿರೆನ್ನುತ । ದ್ರಮಿಳ– ಪಾಲಯಕೈತಂದನಾತ್ಮಜಾತೆ ಸಹಿತ ॥೨॥

ರಾಗ - ಬೇಗಡೆ । ಏಕತಾಳ (ಏನೆಂಬೆ - ದೈತ್ಯ ಮಾಡಿದ ಮಾಯಕವನು)

ಏನೆಂಬೆ - ನಂಶುಮತಿಯ ಲಗ್ನದ ಸೊಬಗೇ ನೆಂಬೆ ॥ ಪ ॥ ಏನೆಂಬೆ ಪಾತ್ಮಜಾತೆಯ ಲಗ್ನವೆನುತ । ಮಾನಿತ ದ್ರಮಿಳನುತ್ಸಾಹವಗೊಳುತ । ತಾನೆದ್ದು ನೆಂಟರಿಷ್ಟರಕರೆಸುತ್ತ । ನಾನಾದೇಶಕೆ ಭೃತ್ಯರನು ಕಳುಹಿಸುತ । ಸಾನುರಾಗದೊಳಾಪ್ತ ಮಿತ್ರರ । ಮೇಣಮರ ಯಕ್ಷೋರಗರಸಂ । ತಾನವನು ಕರೆಸುತ್ತ ರಮ್ಯದ । ವೀನತೆಯ ಮಂಟಪವಗೈಸಿದ—ನೇನನೆಂಬೆ ॥ ೧ ॥ ಭರಿತ ವಾಗಲು ಪರಿಕರಗಳು ಎಲ್ಲ । ನೆರೆಯಲುಗಂಧರ್ವಾದಿಗಳ ಸಮ್ಮೇಳ । ವರಶು ಚಿವ್ರತನೊಡನವನಿಪಾತ್ಮಜನು । ಬರದಿ ದಿಬ್ಬಣಗೂಡಿ ಬರಲು ದ್ರಮಿಳನು । ಹರುಷದಿಂ ತಾನಿದಿರುಗೊಳ್ಳುತ । ಕರವಿಡಿದು ಮಂಟಪಕೆ ಕರತಂ । ದಿರಿಸಿದಾ ಮೇಲ್ ಮಗಳಧಾರೆಯ । ನೆರೆದನತಿಶುಭವಾದ್ಯ ಘೋಷದಿ ॥ ೨ ॥

॥ ವಾರ್ಧಿಕ ॥

ಸುರರಭ್ರದೊಳ್ ಜಯಧ್ವನಿಯೊಡನೆ ಪೂಮಳೆಯ । ಗರೆಯಲಾಗಳೆ ದ್ರಮಿಳನೊಲಿದಿತ್ತನುಡುಗರೆಯ । ಕರಿಹಯಂಗಳ ಲಕ್ಕಲೆಕ್ಕದಿಂ ರಥಪದಾತಿ ಗಳಸಾಸಿರಲೆಕ್ಕದಿಂ ॥ ತರತರದ ರತ್ನಮಯ ಮಣಿಭೂಷಣಗಳನಿ । ತ್ತುರು ತರದ ದಿವ್ಯಾಸ್ತ್ರ ಶಸ್ತ್ರಂಗಳಂಸಹಿತ । ಪರಿವಿಡಿಯೊಳಾಂತು ಧುರಮಂಣೆಗಳ್ವ ರೀತಿನೀತಿಗಳ ನಿರವಿಸುತೆಂದನು ॥ ೧ ॥

ರಾಗ ತೋಡಿ । ತಾಳ - ಅಷ್ಟ [ಬಂದಳಾಸಭೆಯೊಳಾಗ]

ಇತ್ತಕೇಳ್ ಧ ರ್ಮ ಗು ಪ್ತ । ಪಾರ್ಥಿವಕುಲ—ರತ್ನಕೇಳ್ ಪೇಳ್ವ ಮಾತ ॥ ಪ ॥ ಇತ್ತಕೇಳ್ ಪರಭೃತ್ಯಕನಾಗಿರ । ಲೆತ್ತಣದು ಸತ್ಕೀರ್ತಿಯಯ್ಯನ । ಪೃಥ್ವಿಯನು ವಶಗೈದು ರಾಜಾ । ದಿತ್ಯನಾಗೈ ಕ್ಷಾತ್ರತೇಜದಿ ॥ ೧ ॥ ನೋಡಿ ದಕೊಶಸ್ತ್ರಾಸ್ತ್ರಗಳ ಜತೆ । ಮಾಡಿ ಗಂಧರ್ವಾದಿಸೇನೆಯ । ಖೋಡಿಸಾಲ್ವನ ತರಿದರಾಳ್ವೆಸ । ಗಾಢದಿಂದ ವಿದರ್ಭದೇಶವ ॥ ೨ ॥ ನಡೆಮಗನೆ ಧುರಕಳುಕ

ದಿರುಕ್ಷಣ । ಮೃಡನ ಮೆಚ್ಚಿಸುತ ವಿಳವರಗಳ । ಪಡೆದುಹೋಗಾ ಬಳಿಕುಲದ ಸದೆ । ಬಡಿದು ಮೆರೆಸೈ ಕುಲದ ಘನತೆಯ ॥ ೩ ॥ ಎಂದೆನಲು ನೃಪನಾಗ ನಾಗಳೆ । ಮುಂದರಿದು ಸುಸ್ಥಳವನರಸುತ । ನಿಂದನುರುತರ ತಪದಿ ಜಯ ಜಯ । ವೆಂದುಸ್ತುತಿಸಿದನೀಶನಂಘ್ರಿಯ ॥ ೪ ॥

ಕಂ ॥ ಅತಿಭಯ ಭಕ್ತಿಯೊಳಾಪ್ಪದ । ಸುತನೇಕಾಗ್ರತೆಯನಾಂತು ತಪ ಕ್ಷಪಗೆಯ್ಯಲ್ ॥ ಶಿತಿಕಂಠನಾಶನಾತ್ಮ್ಯ । ಸ್ಥಿತಿಯಂತನ್ನನದೊಳರಿತು ಮೈದೋ ರ್ದೆಂದ ಂ॥ ೧ ॥

ರಾಗ – ಮುಖಾರಿ । ತಾಳ – ಝಂಪೆ

ಮೆಚ್ಚಿಸ್ಲಿದೆನು ಮಗನೆ ತಪನಿಷ್ಟಬಭಕ್ತಿಗೆ । ನ್ನಿಚ್ಛೆಯೊಪ್ಪದೊ ತಿಳಿದೆ ಮಚ್ಚಿತ್ತದೊಳಗೆ ॥ ಪ ॥ ಪರಪ್ರದೋಷವ್ರತದಿ ಪರಿಸಿರ್ಪೆನೆನ್ನನುವ । ಗಿರಿ ಜಾತೆಯೇ ಒಲಿದು ನೆರವನಿತ್ತಿರಲ ॥ ಬರಿದೆ ಚಿಂತಿಸಲೇಕೆ ದುರುಳರಟ್ಟುಳಿಗಾ ಗಿ । ಪರಿಪಾಲಿಸುವ ಕರ್ತನಿರಲು ನಿನ್ನೊಡನೆ ॥೧॥ ಬಂದುದಾಯ್ತೆನ್ನ ಭಯ ಸಂದೇಹ ಬಿಟ್ಟುನಡೆ । ಮುಂದೆ ಸಾಲ್ವನೊಳು ಜಯ ಹೊಂದಲಿರ್ಪುದು ॥ ಇಂದು ವೀರೇಶನ–ನ್ನೊಂದಿಗೈತಹನು ಭಯ । ಬಂದರಗಜೆಯು ಕಾಯ್ವಳೆಂದು ಮರೆಯದಿರು ॥ ೨ ॥ ಎನುತ ವೀರನ ಕರೆದು ಸನುಮತದಿಕಳುಹಲಾ । ಕ್ಷಣದಿ ಪಶುಪತಿಯೊಜ್ಞೆಯನು ಶಿರದೊಳಾಂತು ॥ ಜನಪಾತ್ಮಜನು ಮರಳಿ ಘನಶಸ್ತ್ರ ಗಳಧರಿಸಿ । ರಣಕೆ ಸನ್ನದನಾದನನಿತು ಬಲಗೂಡಿ ॥ ೩ ॥

॥ ಭಾಮಿನಿ ॥

ಧರ್ಮಗುಪ್ತನು ಮನದಿ ಯೋಚಿಸಿ । ಧರ್ಮಶಾಸ್ತ್ರವ ಬಲ್ಲ ದೂತನ । ದುರ್ಮತಿಯ ಬಳಿಗಟ್ಟಿದನು ವಶಗೈದರಾಜ್ಯವನು ॥ ಒಮ್ಮತದೊಳೊಪ್ಪಿಸು ವುದಲ್ಲದಿ । ರೆಮ್ಮ ಯುದ್ಧಕ್ಕೆ ಬರುವುದೆಂದು ಸ್ವ । ಧರ್ಮನೀತಿಯನೋದಿ ಬಾರೆಂದಿತ್ತನಪ್ಪಣೆಯ ॥ ೧ ॥

ರಾಗ - ಮಧ್ಯಮಾವತಿ । ತ್ರಿವುಡೆ [ಧೂರ್ತಕಂಸಾಸುರನ । ಬೆಸನದಿ]

ಕೇಳಿರೈ ಮುನಿಮುಖ್ಯರೆಲ್ಲರು । ಸಾಲುವನ ಸಭೆಗೈದಿದೂತರು । ಪೇಳಿ ದರು ತಮ್ಮೊಡೆಯನಾಜ್ಞೆಯ ನಾಳುತನದಿ ॥ ಖೂಳತನ ಬಿಡು ಸತ್ಯರಥನ ವಿ । ಶಾಲ ಭೂಮಿಯನೆಮ್ಮರಾಯರ । ಪಾಲಿಗೊಪ್ಪಿಸಿ ನಡೆವುದತಿಹಿತ ಮೇಲನ ರಿತು ॥ ೧ ॥ ಧರೆಯನೊಪ್ಪಿಸದಿರಲು ಯುದ್ಧಾ । ತುರದೊಳಿದಿರಾಗುವುದು

ಕೇಳೆಲೊ । ಅರಿ ವಿಲಿಗಳಂದದಲಿ ಪ್ರಾಣವ । ತೊರೆಯಲೇಕೋ ॥ ಅರಿಯ ದೊ ನಮ್ಮಾಜ್ಞನು ನೀ । ನಿರಿದು ಕೊಂದಾತನ ಕುಮಾರಕ । ಧುರ ವಿಜಯ ನವ ಧರ್ಮಗುಪ್ತನ । ಚರಿತೆಗಳನು ॥೨॥ ಸಾಲ್ವನಾಕ್ಷಣ ಪ್ರಳಯ ಕಾಲದಿ । ಬೀಳ್ವ ಕೆಂಗಿಡಿಯಂತೆ ಮಸಗುತ । ಪೇಳ್ವುದೇಂ ನಡೆ ಪೋಗು ತಡೆ ನಿ । ಮ್ಮಾಳ್ವನಲ್ಲಿ ॥ ಸೋಲ್ವನೇ ಸಂಗ್ರಾಮದಲಿ ಕ್ಷಮೆ । ತಾಳ್ವನೇ ಧರೆಯೊಳೆ ಶರದ ಲಿ । ಕೀಳ್ವೆ ಕರುಳನು ಮೇಲ್ಪರಲ್ಕೆದೆ । ಸೀಳ್ವೆನೆಂದ ॥೩॥

॥ ಭಾಮಿನಿ ॥

ಎಂದು ಕೋಪೋದ್ರೇಕದಿಂ ಭುಗಿ । ಲೆಂದು ಭೋಗುಡಿಸುತ್ತ ದೂತ ರ । ಮುಂದೆ ಹೊಡೆದಟ್ಟಿದಾ ಮೇಲ್ ಸಾಲ್ವನರಮನೆಗೆ ॥ ಬಂದು ಶಯ್ಯಾ ಗೃಹದಿ ಮಲಗಿರ । ಲಂದಿರುಳು ದುಃಸ್ವಪ್ನ ದರ್ಶನ । ದಿಂದ ನಡುಗುತಲೆಂದ ಳಾತನ ಮಡದಿ ಮುರಿದೆದ್ದು ॥೧॥

ರಾಗ - ಯರಕಲ ಕಾಂಬೋಧಿ । ತಾಳ— ಝಂಪೆ

ಕಾಂತೆ ಚಿತ್ತವಿಸು ಮಾತ । ಈಗೆನ್ನ ಮನಕೆ ಚಿಂತೆ ಹೆಚ್ಚಿತು ಧೀಮಂ ತ । ಎಂತ ದುಃಸ್ವಪ್ನ ದುರಂತವೊ ತಿಳಿಯೆ ನಾ । ಪಂಥವ ಬಿಟ್ಟೆನ್ನ ಶಾಂತ ಗೊಳಿಸು ಕಾಂತ ॥೧॥ ಮರುಳಾದೆ ಯೇನೆ ಕಾಂತೆ । ಏತಕೆ ಚಿಂತೆ— ಸ್ಥಿರತೆ ಯಿಂದೊರಗು ಮುಂತೆ । ಭರಿತ ವಿಕಾರದೊಳಿರಲು ಸ್ವಪ್ನಗಳಾಗೆ । ತರಹರ ಗೊಳದೆನ್ನ ಕರಕರಿಸದಿರೀಗ ॥೨॥ ಭಾಳ ಲೋಚನ ಶಿವನ । ಅಂಧಕಾದ್ಯರನು- ಕಾಲಗೊ – ಬ್ಬಿಸಿದಾತನ । ಶೀಲ ಭಕ್ತರು ನಿನ್ನ ಕಾಲಗೊಬ್ಬಿಪರಂತೆ । ಕಾಳಗ ಬಿಟ್ಟು ಸಮ್ಮೇಳದೊಳಿರೆ ಲೇಸು ॥ ೩ ॥ ಶೂಲಿಯ ಬಲವಿರಲು । ನರ ಪುಳುಗಳು – ಸೋಲಿಸಲುಂಟೆಪೇಳು । ಶೂಲಿಯೊದರು ಸಮಪಾಳಿ ಬಿಟ್ಟಪನೆ ಮೇಣ್ । ಧೂಳಿ ಮಾಳ್ಪೆನು ಬಂದ ಖೂಳರನೊಮ್ಮೆಗೆ ॥೪॥ ತಪ್ಪಾಯಿತಲ್ಲೊ ದೇವ। ವಿದರ್ಭ ದೇಶ– ಪೊಪ್ಪಿಸಲೇನು ಹೇವ । ತಪ್ಪನು ಒಪ್ಪಿಕೊಂಡು ಬಪ್ಪ ಸೌಖ್ಯವನುಂಡು । ಇಪ್ಪುದೊಳ್ಳಿತು ವ್ಯರ್ಥ ದರ್ಪ ತೋರದಿರಯ್ಯ ॥೫॥

ರಾಗ – ಮುಖಾರಿ । ತಾಳ – ಏಕ

ಸಾಕು ನೀ ಶೋಕಿಸಬೇಡೆಲೆ ಬಾಲೆ । ಸೈರಿಸು ಗುಣ ಶೀಲೆ ॥ಪ॥ ಧುರ ದಿ– ಜಯವೆಂಬುದು ದೈವಾಧೀನ । ಬಿಡದಿರೆ ಶಿವಧ್ಯಾನ–। ಭರದಿ– ಬಲವ ಪ್ಪುದು ದೈವದ ಕರುಣ । ತರಳನಯನೆ ಜಯ ಸಂಸುತಲೈತಪೆ । ಮರೆದೊರಗಿ

ದರೇಂ ಕೀರ್ತಿಯದಲ್ಲಪೆ ॥೧॥ ಎನುತಾ– ಪರಿಪರಿಯಲಿ ಬೋಧಿಸುತಾಗ । ನೋಡಲು ಮುಂಭಾಗ । ವಿನತಾ– ನಂದನ ನಿಂದೇಳಲು ರಾಗ । ದಸು ಗೊಡ ಲಳಿಗಳಿ । ಯನಿತರೊಳಾಕಿಯು । ತನಿಸುತ ಪೊರಟಾಸ್ಥಾನಕೆ ನಡೆದಾ ॥೨॥

ಕಂ ॥ ಇತ್ತಲ್ ಸಾಲ್ವನ ಪುರಸಾ । ರ್ದತ್ತಿತ್ತಲ್ ಸುತ್ತ ಮುತ್ತಿ ನೃಪ ಸುತನಾಜ್ಞಾ ॥ ಪತಿಗಳೆಸಗಲ್ ದಳಮುಳೆ । ಬಿತ್ತರಿಸಿದರಸುರ ಭೃತ್ಯರಾಳ್ವನ ಬಳಿಯೊಳ್ ॥ ೧ ॥

ರಾಗ – ಮುಖಾರಿ । ತಾಳ— ಏಕ

ಚಿತ್ತೈಸಬೇಕು ದೊರೆರಾಯ । ಬಂದಿದೆ ನೋಡತ್ತ–ಶತ್ರು ಮಾರ್ಬಲ ವೂಪುರದತ್ತ । ಕತ್ತಿಸಬಳಕುಂತಾದಿ ಶಸ್ತ್ರಗಳೆ । ನೆತ್ತುತ ಬಂದೀಪತ್ತನ ಬಾಡೆ ಯೊ । ಳತ್ತಲಿತ್ತ ದುಮ್ಮಿಕ್ಕುತ ಧಾಳಿಯ । ನಿತ್ತೆಮ್ಮನು ಹೊಯ್ದಟ್ಟಿದರ ಯ್ಯ ॥ ೧ ॥ ಕಾರ್ಯಕಾರಣವರಿಯೆವಯ್ಯ । ನೋಡಿದ್ರೆ ಮಹಾ-ಮಾರಿಯ ಬಳಗದ ಹಾಂಗಿಪುದಯ್ಯ । ಧೈರ್ಯವೆಷ್ಟೊ ಯಮರಾಯ್ರ ಕೂರಾಳ್ಗಳ । ಕ್ರೌರ್ಯತೋರ್ಪರಾ ಸೈನಿಕರಲ್ಲಿ । ಶೌರ್ಯದ ಮದಗಜರಥಹಯಗಳ ಬಲ । ವಾರ್ಯಮಗಾದರು ಲೆಕ್ಕಿಸಲರಿದು ॥ ೨ ॥

ರಾಗ—ಭೈರವಿ । ತಾಳ ಅಷ್ಟ

ಭೃತ್ಯರ ನುಡಿಯಕೇಳಿ । ಸಾಲ್ವನು ಗಜ–ರುತ್ತಲೆಂದನು ಕೆರಳಿ । ಮುತ್ತಿ ದರೇಪ್ಪುರ । ಶತ್ರುಭಟರು ಮುರಿ । ದಿತ್ತಪೆ ಮಾರಿಗೆಂದು ॥ ೧ ॥ ಕೇಳಿರಮಾ ತ್ಯರೆಲ್ಲ । ರಣಾಜಿರ–ಕೇಳಿರಿ ಸುಭಟರೆಲ್ಲ । ಕಾಳಗಹಾರಯ್ಯ । ದಾಳಿಗೊಟ್ಟಿಹ ರಂತೆ । ಖೂಳಹಗೆಗಳುಕ್ಕುತ ॥ ೨ ॥ ತಿಳಿದಿರೆ ಹೊಸಕಥೆಯ । ಸತ್ಯ–ರಥ । ನಳಿದ ಮೇಲಣ ಬಗೆಯ । ಉಳಿದಿರ್ಪನಂತೆಯೂ । ಪುಲು ನೃಪಾತ್ಮಜನೊ ರ್ವ । ಹಳೆಚುವನಂತೆಪ್ಪೊಳು ॥ ೩ ॥ ಜನಕನ ರಾಜ್ಯವನು । ಈಳ್ದೊಯ್ದ ಸಾ–ಧನೆಯೊಳ್ಗೈತಂದಿಹನು । ಬಣಗುಗಂಧರ್ವರಂ । ಗನೆಯುವರಿಸಿ ಮತ್ತಾ । ಗಣಕೆ ಹೆಗ್ಗಣನಿರ್ಪನು ॥ ೪ ॥ ಬರಲಿ ಯುದ್ಧಕೆ ಹೊಡೆದು । ಬಡಿದಿಕ್ಕುತ– ನೆರವಿತ್ತವರ ತರಿದು । ಮೆರಸಬೇಕ್ಕೈ ಜಯವರಿಸದಿದ್ದರೆ ಸಾಲ್ವ । ದೊರೆಯೊ ಗರ್ವದೆ ವ್ಯರ್ಥವು ॥ ೫ ॥ ಎನೆ ವೀರಬಾಹುವಾಗ । ನರ ಹುಳುವಿಗೆ–ಇನಿತಾ ಯ್ತು ಧೈರ್ಯವೀಗ । ಕ್ಷಣದೊಳಿರಿದು ಮತ್ತಾತನ ಬಲಮುರಿದು ಕೈ । ಮಿನಿ ಗಟ್ಟುಲಿಹೆನೆಂದನು ॥ ೬ ॥

ರಾಗ—ಮಾರವಿ । ತಾಳ—ಏಕ

ಇಂತೆನಲೂರ್ಧ್ವಕೇ । ಶಾಂತಕನೋಲ್ ಖತಿ । ಯೊಂತುನುಡಿದ ಭಳಿರೆ ॥ ಪೇಘದೊಳಕಿತರ । ತಾಂತರದಿಕ್ಕಲು । ಮುಂತ್ಯೈದುವೆನೆನುತ ॥ ೧ ॥ ಕೊಡು ಕೊಡು ನೇಮವ । ಬಿಡುಗಣ್ಣಿರೊ ಮೇಣ್ । ಮೃಡನ ಬಲವೆ ಬರಲಿ ॥ ಕೆಡವು ವ ಭಟನರೆ । ಪೊಡವಿಪನುತನು ಸಿ । ರಡಗಿಸದಿರ್ದಪೆನೆ ॥ ೨ ॥ ಕೇಳುತವರ ನುಡಿ । ಸಾಲುವನಿರ್ವರ । ಮೇಲಿಟ್ಟರಿಬಲವ ॥ ಮೂಲಿತರಿದು ಸುಖಿ । ಬಾಳುವೆನ್ನುತ । ಬೀಳುಗೊಟ್ಟನಾಗ ॥ ೩ ॥ ಬಂದರು ಗದೆಗೊಂ । ಡಂಧಕಹರನೆನು । ವಂದದೋರ್ಭಟಿಸಿ ॥ ವೃಂದಾರಕರಿದೆ । ಗುಂದಲಸುರ ಬಲಿ । ಸಿಂಧುವನೊಡಗೂಡಿ ॥ ೪ ॥ ಎರಡು ಬಲಗಳ । ಬ್ಬರದಿಂದುಬ್ಬುತ । ಸುರರಸುರರೆರದಿ ॥ ಧುರಕಿದಿರಾಗಲು । ದೊರೆಸಾಲ್ವಾತ್ಮಜ । ಗೊರೆದನು ಧರಣಿಪನು ॥೫॥

ರಾಗ-ತೋಡಿ । ತಾಳ-ಅಷ್ಟ (ಯೂರಿಲಾವನುಜ ಬಂದಿರುವವ)

ಯೂರೆಲಾದುರುಳೆ । ಎನ್ನೊಳುಕಾದ—ಲಾರೆಲಾದುರುಳ । ಯೊರುನೀಂ ಪಡದುಪ್ಪ ಜವ್ವನ । ಪೇರಿಬಂದ್ಯೆ ಶಲಭದಂದದಿ । ಹಾರಿ ಸಮರಾಗ್ನಿಯಲಿ ಬೇಯುವ ಹೋರೆಯೇತಕೆ—ಸಾರುಹಿಂದಕೆ ॥ ೧ ॥ ಯೊರು ಕೇಳ್ವವನು । ಸಾಲ್ವನ ಸುಕು—ಮಾರನಾನಹೆನು । ಪೋರನಿನಗೇಕೆಮ್ಮೊಳಾಹವ । ಘೋರಸಮರದ ನೀತಿಯರಿಯದೆ । ಭಾರಿಸಿಂಹದಬಾಯ್ಗೆ ಕುರಿಪೋ । ಲೇರಿ ಬೀಳ್ವವಿಚಾರವೇಕೆಲೊ ॥ ೨ ॥ ಸಾಕು ನಾಬಲ್ಲೆನು । ಜಂಬದ ಮಾತು—ಪೋಕೆಮ್ಮತ್ಮವನು । ಏಕೆ ತಬ್ಬುವೆ ಪೋಗು ಸಾಲ್ವನ । ಜೋಕೆಯಿಂ ಕಳುಹಿತ್ತಲಾತನ ಶಾಕಿನಿಯರಿಂಗುಣಿಸಿ ರಿಪುಗಳ । ನೂಕಿಯಮನೆಡೆಗುಯ್ವೆ ರಾಜ್ಯವ ॥ ೩ ॥ ಬಲ್ಲೆನಾ ಕಥೆಯ । ನಿನ್ನಯ್ಯ ನೀ—ಗೆಲ್ಲಿನೀ ಕಂಡೆಯ । ಅಲ್ಲಿಗೆಲ್ಲರ ನೂಕುಪತಿ ಬಲ ಸಾಲ್ವನೊಳಗಿಲ್ಲೆಂದು ತಿಳಿದೆಯ । ದೆಲ್ಲಿಕಾಂಬುದುಲೂಕವರ್ಕನ । ಹಲ್ಲಮುರಿದಪೆ ಹೋಗುದಿಮ್ಮನೆ ॥ ೪ ॥ ಮುಚ್ಚು ಬಾಯ್ ಖಳನೆ । ಪ್ಯೆಗೊಬ್ಬಿನಿಂ—ಹೆಚ್ಚಲೇಂ ಧೂರ್ತನೆ । ಸಚ್ಚರಿತ್ರೆಯ ಸೈಸದಯ್ಯನ ಕೊಚ್ಚಿ ಕೆಡಹಿದ ದುಷ್ಟರುಳಿವರೆ । ಮೆಚ್ಚುವನೆ ಶಿವನೆನ್ನಶಸ್ತ್ರದ । ಕಿಚ್ಚಿಗಾಹುತಿಯಪ್ಪುದರಿಯೆಲೊ ॥ ೫ ॥ ಸತ್ವವಪ್ಪಿಹುದೇ । ತೋರೆಲೊರಣ—ಕ್ಷೇತ್ರದೊಳ್ ಭುಜದ । ಸತ್ವಸಹಸಿಗಳೆಮ್ಮೊಳಾಹವ । ವಿತ್ತು ಜೈಸಿದರಿಲ್ಲವೆಂಬುದನಸ್ತ್ರಮುಖದಿಂ ತೋರ್ಪೆನೆಂದಧ । ಮಾತ್ಮಸಜ್ಜನು ನಿಶಿತಶರಗಳ ॥ ೬ ॥

ರಾಗ—ಕೇದಾರ ಗೌಳ । ತಾಳ—ಝಂಪೆ

ವಿಶಿಖಸ್ತ್ರಗಳ ತರಿಯುತ । ಪ್ರತ್ಯಸ್ತ್ರ—ಗಳನೆಸೆಯೆ ಧರ್ಮಗುಪ್ತ । ಹಿಡುಕಿನಿಂ ಖಂಡಿಸಿದನು । ಬಳಿಕ ಕಣೆ—ಮಳೆಗರೆದನಾ ಧೂರ್ತನು ॥೧॥ ಬರುವಸ್ತ್ರಗಳ ಮಧ್ಯದಿ । ಕತ್ತರಿಸಿ— ಶರಜಾಲಂಚಾವೇಶದಿ । ಧರಣಿಪಾತ್ಮಜನೆಚ್ಚನು । ಧಗಧಗನೆ — ಉರಿವ ದಿವ್ಯಾಸ್ತ್ರಗಳನು ॥೨॥ ಆ ಸುದಿವ್ಯಾಸ್ತ್ರಪತಿಗೆ । ತಾಮೂರ್ಧ್ವ— ಕೇಶಿಯೊರಗಲು ಧಾತ್ರಿಗೆ । ರೋಷದಿಂದಿರು ನಿಂತು । ಸಾಲ್ವನಾ—ಧೀಸಚಿವ ನುಡಿದನಿಂತು ॥೩॥ ಎಲವೊ ನರಗುರಿಯೆ ನೀನು । ವಮ್ಮೊಡನೆ — ಕಲಹಕನುವಾದೆಯೇನು । ಬಲದಿ ಬಲ್ಲಿದರ ಗೆಲಿದು । ಜೀವದಿಂ—ಮರೆಯುಳಿರ್ದಪೆಯ ಮುಂದು ॥೪॥ ಯೊರು ನೀನೆಲೊ ದುರಾತ್ಮ । ನಾ ಬಂದ—ಕಾರಣವನರಿಯೆ ಧೂರ್ತ । ಹೋರದಿರು ಹೋರಿಯಂತೆ । ಸತ್ಯವನ—ದಾರಿ ತೋರಿಸುವೆನಲ್ತೆ ॥೫॥ ತರಳ ನೀ ಬಲ್ಲೆಯೇನು । ನಿನ್ನಯ್ಯ—ನರಿತಿಹನು ಮೊದಲೆನ್ನನು । ದೊರೆ ಸಾಲ್ವನಿಗೆ ಸಚಿವನು । ಧುರ ಧುರಂ—ಧರ ವೀರಬಾಹುವಾನು ॥೬॥ ಇಂತು ಕಾದಾಡುತಿರಲು । ಪರನಾಷ್ಟ್ರ-ಯಂತೆ ರಕ್ಷಣೆ ಗೆಯ್ಯಲು । ಮುಂತೆ ತಡೆದಿಂತೆಂದನು । ಕಾಲಾಗ್ನಿ—ಯಂತಿರುವ ವೀರೇಶನು ॥೭॥

ರಾಗ — ಭೈರವಿ । ತಾಳ — ಮಟ್ಟೆ (ಬಿಡು ಬಿಡಾ ಮುಹಾ ಸಿಂಹ ರಾಜನ)

ಭಳರೆ ನಿಲ್ಲೆಲಾ ಖಳ ಕುಲಾಧಮ । ಬಲುಹ ತೋರ್ದರೇ ಕ್ಷಣದಿ ತರಿವೆನಾ । ಎಳೆಯರೊಂದಿಗೇ ಕಾದಿದರೆ ಛಲಾ । ಬಲದೊಳಗ್ಗಳ ಸುಭಟನಾದೆಯೊ ॥೧॥ ಯೊರು ನೀ ಮದದಾನೆಯುಹೆಯಲೋ । ಕೋರೆ ಹಲುಗಳ ಕೆದರ್ದಟಿಕೆಗಳು ತೋರುತೆಮ್ಮೊಳು ಸೆಣಸಲೇಕೆಲೊ । ಸಾರು ಹಿಂದೆ ಮುಂದೋರಲಿರಿವೆನು ॥೨॥ ಬಲ್ಲೆಯೊ ನೀನೆನ್ನಾದಿ ಚರಿತೆಯೂ । ಕ್ಷುಲ್ಲ ದಕ್ಷನಾಮುಖ ವಿಧ್ವಂಸನಾ । ಮಲ್ಲವೀರಭದ್ರಾಂಶನಿರುವರೇ । ಗೆಲ್ಲ ವಿಜಯವಿನ್ನೆಲ್ಲಿಸ್ವಾಯುವು ॥೩॥ ಭಲೆ ಶಭಾಸು ನೀ ವೀರನೇ ಕಣಾ । ಬಳಿದು ಭಸ್ಮವತ್ತ್ವ ಸಾರೆಲೊ । ಇಳೆಯ ಸೇರುತ ಬಲವ ತೋರುತ । ಕಳೆದು ಮಾನವ ಬದುಕಲೇಕೆಲೋ ॥೪॥ ಸತ್ಯ ಧರ್ಮವನಳಿಸಿದಧಮರ । ಕುತ್ತಿ ಕೆಡಹುವಾ ಧರ್ಮವೆಮಗಿರೇ । ಸತ್ಯ ರಥನ ಸಾಮ್ರಾಜ್ಯವಾತನ । ಷತ್ರಗೊಟ್ಟಿಸಿ ಮರಳ್ದೆ ತೀರಿಯೆಲಾ ॥೫॥ ಮಾತಿನಿಂದಲೇನಾತ್ಮ ಶಕ್ತಿಯ । ಘಾತಿಯಲ್ಲಿ ನೋಡೆಂದು ದರುಳನು । ಆತು ಹೊಡೆಯಲು ಗದೆಯ ದಕ್ಷನಾ । ರಾತಿ ಸೆಳೆಯುತ ತಿರುಗಿ ಹೊ

ಯ್ದನು ॥೬॥

ಕಂ॥ ನುಡಿದಪುದೇಂ ವೀರೇಶನ । ಪೊಡೆತಮನಾ ವೀರ ಬಾಹುಕಂ ಸ್ವೀಕರಿಸದಾ । ಕಡೆಯಿಂದಸುವಿಡಿದೋಡಲ್ । ದವಿಗ ಭಟರ್ ನೊಂದು ಬೆಂದು ಮರಳಿದರತ್ತಲ್ ॥೫॥

। ವಾರ್ಧಿಕ ।

ಅನಿತರೊಳಗಪರಾಬ್ಧಿಗಿಳಿಯಲರ್ಕಂ ಬಳಿಕ । ಜನರೆಲ್ಲ ವಿಶ್ರಾಂತಿ ಗೈದ ಲೋರೆಂದೆಡೆಗೆ। ದಿನಪ್ಪುರುಳಿ ಕಾರಗತ್ತಲೆ ಮುಸುಕಲಾರಾತ್ರಿ ಸಾಲ್ವೇಂದ್ರ ನಿದ್ರಿಸುತಿರೆ॥ ಘನ ಮಹಾ ದುಃಸ್ವಪ್ನಮಂ ಕಂಡು ಸುಗಿದೆದ್ದು। ತನಗಿದೇಂ ಮರಣ ಸೂಚನೆಯೆಂಬ ಚಿಂತೆಯಲಿ। ಮನಮರುಗುತೋಲಗಂ ಗೊಟ್ಟನಾ ಭದ್ರಕೇಶಿ ಪ್ರಮುಖ ಸಚಿವರೊಡನೆ ॥೫॥

ರಾಗ – ಕಾಂಬೋಧಿ । ತಾಳ - ಝಂಪೆ

ಕೇಳಿರೈ ಸಚಿವಾಪ್ತ । ಶೀಲ ಭಟರೆಲ್ಲ ನ । ಮ್ಮೇಳಿಗೆಗೆ ಕುಂದು ಬರಲಾಯ್ತು ॥ ಕಾಳಗದಿ ಮಡಿದನೈ । ಬಾಲಕನು ಮಂತ್ರಿ ಜನ । ಜಾಲಕಪಜಯವೊದಗಿತಲ್ಲಾ ॥೧॥ ನಿದ್ರಿಸಿದೊಡೇನು ಸುಖ । ನಿದ್ರೆಯುಂಟೇ ನೋಡೆ । ಕ್ಷುದ್ರವಹ ದುಃಸ್ವಪ್ನಗಳಲಿ ॥ ದುರ್ದಶೆಯು ಹೊದ್ದಿತೆಂ । ದಾದ್ಯರ್ರಿದೆನ್ನೀ ಮನವು । ಭದ್ರನಾಗುವೆನೆಂತೊ ತಿಳಿಯೆ ॥೨॥ ಹಗೆತನದಿ ಮುತ್ತಿರುವ । ವಿಗಡರನ್ನಳಿಸದಿರೆ । ಜಗದಿ ಜಸಮಾಣದಿರ್ದಪುದೇ ॥ ದಿಗಧೀಶರಲ್ಲದೆಯೇ । ನಗವರೈ ಭೂಪರೊ । ಮ್ಮಗೆ ಪೇಳ್ತಿರೊಂದುಪಾಯವನು ॥೩॥ ಇಂತೆನಲ್ಕೆದ್ದು । ಮರ್ಗಂತ್ರಿಯೊರೆದನು ಚಿಂತೆ। ಬಂತೇಕೆ ತಂತ್ರಜ್ಞನಿರಲು ॥ ಮಂತ್ರ ಮಾಯೊ ಮೋಸ । ತಂತ್ರದಿಂ ಶತ್ರು ಬಲ । ವಂತ್ಯಗೊಳಿಸಲು ಬೇಹುದೀಗ ॥೪॥ ಇರುಳಿನಲಿ ಹೊಕ್ಕು ಮ । ದ್ದರಿಯ ಬೇಕಹಿತ ಬಲ । ಮರೆದೊರಗಿದಾ ಪಾಳ್ಯವರಿತು ॥ ಕೊರತೆಯಿಲ್ಲೆಮ್ಮ ಕುಲ । ದರಸುಗಳ ನೀತಿಯಿದು । ಪೊರಡತೆಮ್ಮಖಿಳಬಲವೆಂದ ॥೫॥ ಅಸುರತ್ವದಿ ಭದ್ರ । ಕೇಶಿಯೆಂದಾ ನುಡಿಗೆ । ಲೇಸೆಂದು ಕೈಗುಟ್ಟುತೆಲ್ಲ ॥ ಘೋಷಿಸಲು ಕೂಡಿದ । ತ್ತಾ ಸಮಯದೊಳಗೆ ವಾ । ರಾಶಿಯಂದದಿ ಚತುರ್ಬಲವು ॥೬॥

ರಾಗ – ಶಂಕರಾಭರಣ । ತಾಳ ಮಟ್ಟೆ

ಏನನೆಂಬೆ ಸಾಲ್ವನಸುರ । ಸೇನೆ ಮಹಾ ರಜನಿಯೊಳಗೆ । ಹಾನಿ ಗೈದು

ನಡೆಸಿದಂಥ । ಹೀನ ಕೃತ್ಯವ ॥ ಜೇನಿ ಕಳೆಯಲೆನುತ ನೃಪನ । ಸೇನೆ ಗಾಢ ನಿದ್ರೆ ಗೈದ । ಸ್ಥಾನ ಹೊಕ್ಕು ಸವರಿದರು ಕೃ । ಪಾಣಾದಿಗಳಲಿ ॥೧॥ ಸಾಲುಗಟ್ಟಿ ಮಲಗಿದಾ ಕಾ । ಲಾಳುಗಳನು ಘೋಟಕಂಗ । ಳೋಳಿಗಳನು ಮತ್ತವಾರ । ಣಾಳಿಯೆಲ್ಲವ ॥ ಏಳಗೊಡದೆ ಕುಂತ ಸಬಳ । ಬಾಳುಗಳಲಿ ಸೀಳ್ದು ಘೂಳ್ದು । ಕೇಳಿಯೊಡಿದರು ಕರಾಳ । ಖೂಳ ದೈತ್ಯರು ॥೨॥ ಅತ್ತಲಿತ್ತ ಸೀಳದು ಘೋರ । ಹತ್ಯೆಯೆಸಗಲಾರ್ತನಾದ । ವೆತ್ತು ಸುಭಟರರಸ್ತ್ರ ಶಸ್ತ್ರ । ಯುಕ್ತರಾಗಲು ॥ ಕ್ಷಾತ್ರ ತೇಜದಿಂದ ಧರ್ಮ । ಗುಪ್ತ ಧನುವ ಠೇಂಕರಿಸುತ । ಸುತ್ತ ನೋಡಿ ನುಡಿದನಾ ವೀ । ರೋಕ್ತಿಯಿಂದಲಿ ॥೩॥

ರಾಗ ಘಂಟಾರವ । ತಾಳ—ಅಷ್ಟ

ಧೂರ್ತ ರಾಕ್ಷಸರಾರೊ ಬಂದೀ ರಾತ್ರಿ । ಹೊತ್ತಿನಲಿ ಮಲಗಿರ್ಪ ಬಲವನು । ಹತ್ಯೆಗೈವಧಮಾತ್ಮರು ॥೧॥ ಬರಲಿ ಕೌಣಪ ಕರ್ಬುರಾಸುರರಾರೊ । ಇರಲಿ ಭೂತಾಪತಿಯನಿತ್ತಾ । ಭರದಿ ಬಿತ್ತುವೆ ಕೀರ್ತಿಯ ॥ ೨ ॥ ಎನಲು ಭೋಂಕನೆ ಭದ್ರಕೇಶಿಯು ಮೇಘ । ಧ್ವನಿಯೊಳೆಂದನು ಕೇಳ್ವರಾರೆ । ಮ್ಮನು ವರದ ಕೌಶಲ್ಯವ ॥೩॥ ನೀತಿಯೊಪ್ಪದೊ ರಾತ್ರಿ ನಿದ್ರೆಯೊಳಿರೆ । ಘಾತಿಸುವ ಕೃತಿಯೇನು ಕೌಶಲ । ಪೇತುಗಳಿಗೇನರಿವುದು ॥೪॥ ಸಾಲ್ವನ ಪ್ರತಿಹತ ಸತ್ವ ವರಿಯದೆ । ಬೀಳ್ವದೇ ಹುಲಿ ಬಾಯ್ಗೆ ಕುರಿಯೋಲ್ । ಸಲ್ವುದಾಯ್ತು ಪೆ ಮ್ಮಾರಿಗೆ ॥೫॥ ಧರ್ಮಗುಪ್ತನ ಸತ್ವವನರಿಯದೆ । ಹೆಮ್ಮೆಯೊದರದಿರಂದಿನಾ ಸ್ಥಿತಿ । ನಿಮ್ಮವರ ಕೇಳ್ದರಿಯೆಲಾ ॥೬॥ ಸುದುಸುದಾನುಡಿಯೆಮ್ಮ ಯುದ್ಧದಿ ಗೆದ್ದು । ಪಡೆಯಲುಂಟೇ ರಾಜ್ಯವಂದಿನ । ಬಡ ನೃಪರ ಕಥೆ ಬಲ್ಲೆಯಾ ॥೭॥ ಎಂದು ಮುದ್ಗರವೆತ್ತಿ ಹೊಡೆಯಲದ । ನಂದು ತಪ್ಪಿಸಿ ಘೋರ ಶಕ್ತಿಯ । ಮುಂದೆಸೆದನಾಗುಪ್ತನು ॥೮॥

ಶರ ಷಟ್ಪದಿ [ಏಕ ತಾಳ]

ಭರಿತ ಶಕುತಿಯತಿ । ಭರದಿಂ ಮಸ್ತಕ । ಕೆರಗಲು ಮೂರ್ಛಾವಸ್ಥೆಯಲಿ ॥ ಮರುಳನೊರಗಲು । ಬ್ಬರದಿಂ ಸಾಲ್ವನು ಕರೆದೆಂದನು ಮೂಂಕರಿಸುತಲಿ ॥ ೧ ॥

ರಾಗ— ಆಹೇರಿ । ತಾಳ - ಝಂಪೆ

ಯಾರೆಲಾ ಮದಾಂಧ ತರಳನೇ ॥ ಪ. ॥ ಯಾರು ನೀನದಾರು ಗರ್ವ ।

ಪೇರಿ ಗಂಧರ್ವಾದಿ ಸೈನ್ಯ । ಹೇರಿ ನಮ್ಮ ಪುರವ ಮುತ್ತಿ । ಸೂರೆಗೆಯ್ಯಲೇನು ಸಾಲ್ವ । ಧಾರಿಣಿಪನ ಬಲ್ಲೆಯೇನೆಲಾ । ರಣಾಂಗಣದಲಿ–ಹೋರು । ವನಿತು ಸಹಸಿಯೇನೆಲಾ । ಹಮ್ಮಾರಿಯೆಡೆಗೆ – ಸಾರಲಿರ್ಪ ಬಯಕೆಯೇನೆಲಾ ॥೧॥ ಧಿಮರೆ ಸಾಲ್ವನಹುದೆ ನೀನೆ । ಸ್ಮರಿಸುದಿಲ್ಲವೇ ದುರಾತ್ಮ । ಧರಣಿಪಾಲ ಸತ್ಯರಕ್ಷನ । ವರಕುಮಾರ ಧರ್ಮಗುಪ್ತ । ಭರಿತ ಸಹಸಿಯೂನು ಕೇಳೆಲಾ । ಸ್ವರಾಜ್ಯಕಾಗಿ – ಧುರವ ಸಾರಲಾಯ್ತು ನೋಡೆಲಾ । ನಿಮ್ಮಸಿರವಳಿಸಿ - ಮೆರಸಲಿಹೆನು ಕೀರ್ತಿಯನು ಭಲಾ ॥೨॥ ಯಾರು ನೀನಾನೃಪನ ಸುತನೆ । ಹಾರಿ ಬರಲದೇಕೊ ಸ್ವಾರ್ಥ । ಪೂರಯಿಸುವುದುಂಟೆ ಧೀರೊ । ದ್ವಾರ ಪರಬಲಾಬ್ಧಿ ಪಡಬ । ಶೂರ ಸಾಲ್ವನೆಂಬುದರಿಯೆಲಾ । ಶಲಭಾಳಿಯಗ್ನಿ – ಗೇರಿ ಸಾಯ್ವ ತೆರನಿದಾಯ್ತಲಾ । ಮುಂಬರುವನರ್ಥ - ತಾರುಣ್ಯದಲಿ ತಿಳಿವುದೇನೆಲಾ ॥೩॥

ರಾಗ—ಪಂಚಾಗತಿ । ತಾಳ—ಮಟ್ಟೆ

ಸೆಣಸಾಡಿದರವರು । ಕನಲುತಲಿದಿರು ॥ಪ.॥ ದನುಜನು ಮೇಘಾಸ್ತ್ರವ ಬಿಡ । ಲನಿಲಾಸ್ತ್ರದಿ ತರಿಯೆ ॥ ಅನಿಲಾಸ್ತ್ರವನೆಚ್ಚೊಡೆ ಫಣಿ । ಯಣಗಿಸಿ ಬೊಬ್ಬಿರಿಯೆ ॥೧॥ ಖಳನೆಸೆದೊಡೆ ಭುಜಗಾಸ್ತ್ರವ । ನಳಿಸುತ ತಾರ್ಕ್ಷ್ಯನಲಿ ॥ ಬಳಿಕ ನಲಾಸ್ತ್ರವ ಜಲದಲಿ । ಮುಳುಗಿಸಲರಮಗನು ॥೨॥ ಭರದಿಂ ಪ್ರಳಯದ ಬಿರುಮಳೆ । ಸುರಿವಂದದಿ ಸಾಲ್ವ ॥ ಸುರಿಸಿದನತ್ಯುಗ್ರ ಭಯಂ । ಕರ ಶರ ವರ್ಷವನು ॥೩॥ ಧರಣಿಪಸುತನರೆಕ್ಷಣ ಮೈ । ಮರೆತಾಗಳೆ ಎದ್ದು । ಸ್ಮರಿಸಿದನಗಜಾಂಬಿಕೆಯನು । ಹರನಾಜ್ಞೆಯ ನೆನೆದು ॥೪॥

ಪರಿವರ್ಧಿನಿ ಷಟ್ಪದಿ

ಜಯ ಜಯ ಜಗದೀಶ್ವರಿ ಮಾಹೇಶ್ವರಿ । ಜಯ ವಿಜಯಪ್ರದೆ ಜಯತು ಸುಖಪ್ರದೆ । ದಯೆದೋರೌ ಸಾಲ್ವನ ಸಂಹರಿಸುತ ನಮ್ಮೊ ಕಷ್ಟಗಳ ॥ ನಯದಿಂ ಹರಿಸುತ ಕಾಯ್ದಪುದೆನ್ನುತ । ಭಯದಿಂ ಸಂಸ್ತುತಿಸುತ್ತಿರೆ ಮಾಯೊ । ಮಯೆ ತಾಂ ಚಂಡಿಯ ರೂಪಂ ತಳೆದೈತಂದಳು ಬೊಬ್ಬಿಡುತ ॥೧॥

ರಾಗ—ಮಧ್ಯಮಾವತಿ । ತ್ರಿವುಡೆ [ಏನನೆಂಬೆ-ಪೊಡವಿಪ ಕೇಳಾ]

ಏನನೆಂಬೆ ॥ಪ.॥ ಏನೆಂಬೆನಾ ಆ ಚಂಡಿಯ ನವರ । ಕ್ತಾನನದಲಿ ಕೆಂಗಿಡಿಗಳನುಗುಳುತ । ಬಾನತ್ತಲು ಮೈದೋರುತ ಖೇಟಕ್ಕ । ಪಾಣಗಳಿಂದೈತರುವ ಮಹಾದ್ಭುತ – ವೇನ - ನೆಂಬೆ ॥೧॥ ಏನಿದು ಭೂತವೊ ಮೃತ್ಯುವೊ ಭೈರವಿ।

ಯೋನಿದು ರಣಮಾರಿಯೊ ಎಂದಸುರನು । ಕಾಣುತಬಾಧೆಗಾಡಿದೋಡದಿ ರೋ । ಪ್ರಾಣದಿ ಓಡಿ ಬದುಕಿರಲೈರಿಯೆಂದನು । ಏನನೆಂಬೆ ॥೨॥ ಸುತ್ತಲು ಕ್ಷೋಣಿಪರತ್ತಿತ್ತಲು ಕಾ । ಗನತ್ತಲೆಯೆಸೆ ಖಳ ಕುಲವಾಮರಿಸಲು । ಕುತ್ತಿದರೊತ್ತಿದಳೆತ್ತುತ ಕತ್ತಿಯ । ಕತ್ತರಿಸಿದಳಖಿಳರ ಮಾಂಸಾಳಿಯು ॥೩॥ ಮೆಟ್ಟಿದಳೊಟ್ಟಿದ ಕರಿ ಹಯಗಳ ಪದ । ಘಟ್ಟನೆಯಲಿ ತೇರ್ಗಳ ಪುಡಿಗೆಯ್ಯಲು । ಕಟ್ಟಿದೆ ಮುತ ಬಾಯ್ಬಿಟ್ಟ ಸುಭಟರಾ । ತಟ್ಟೋಡಿಸು ಬೆನ್ನಟ್ಟುತ ಬರಲು ॥೪॥ ಕಂಡಾ ಸಾಲ್ವನಮಾತ್ಯ ಸಹಿತ ಭಯ । ಗೊಂಡೆತ್ತಲೊ ಪೆಂಗೊಟ್ಟೋಡಲು ರಣ । ಚಂಡಿಕೆಯ್ಯದಿದಳಾಗುಪ್ತಗೆ ಜಯ । ಗೊಂಡವೆಯಿಂದ ಭಯವಾನುತ್ತೊದನೆ ॥೫॥

ಕಂ ॥ ಮೃಡನರಸಿಯು ಕನ್ನೆಯೊ । ದೊಡನಾ ಸಾಲ್ವೇಂದ್ರನೊಡಲ ಕ್ರೋಧಾನಲನಂ ॥ ತಡೆಯದೆ ಬಂದಿತ್ತೈಸುತ । ಮುಡಿದಂ ಧೋರ್ಗಾದಿಸುತ ಮನಿಪಾಲಾತ್ಮಜನೊಳ್ ॥೧॥

ರಾಗ - ಪಂತುವರಾಳಿ । ಮಟ್ಟೆ [ಪೂತರೇ ಭಲಾ ಜಾಣನಲಿ]

ಬಾರೊ ಪೋರನೇ । ತೋರು ಬಲುಹನೆ । ಮಾರಿಭೂತಾಮುತಿಯನೀವ । ಕಾರ್ಯವಿದೆ ಭಲಾ ॥೧॥ ಗರುವವೇಕೆಲಾ । ಧುರವು ಸಾಕೆಲಾ । ಮರುಳರಂತೆ ಭಯದೊಳೋಡಿ । ಮರಳಿ ಬಂದೆಯೊ ॥೨॥ ಮಡುಗನೆಸುತ ಪಾರುಳರಂತೆ ... ಬಿಡಲು ತತ್ಕ್ಷಣ । ಬದಿಯುತೇನೊ ಮಾರಿ ಮಸಣ । ದೆಡೆಯು ತೋರ್ಪೆನಾ ॥೩॥ ತರಿದೆಮ್ಮಯ್ಯನಾ । ಧರೆಯನಾಳ್ದಿಯ । ಭರಿತ ದ್ರೋಹ ಮರೆಯಬಲುಂಟೆ । ಕೆಡುವೆ ಶಿಕ್ಷೆಯ ॥೪॥ ತಂದೆಮಕ್ಕಳು–ಹೊಂದಿ ಬಾಳ್ವುದು । ಚಂದವಿದುವೆ ಕಾಲ ಹೊಂದ । ಲೆಂದು ತೀದಿರೋ ॥೫॥ ಮಡಿಯು ಪೌರುಷ - ಕೆಡುವ ... ಕೊಡುವುದುಚಿತವೆ ॥೬॥ ಕೊಡುವೆ ಸಾಹಸ । ಮಡಿಯಲೀತಕೆಮ್ಮ ರಾಜ್ಯ । ಕೊಡುವುದುಚಿತವೆ । ದವಿಗ ಸಾಲ್ವ ರಾಜ್ಯವ । ತೊಡುವ ಶರದಲಿ । ತಡೆದುಕೋ ಎಂದೆಚ್ಚವಸ್ತ್ರ । ದವಿಗ ಸಾಲ್ವನು ॥೭॥ ತರಿದು ಬಿಸುಡುತ । ದರುಮಗುಪ್ತನು । ತಿರುಗಿ ಬರುವ ಶೈಲಾಸ್ತ್ರವನು । ತರಿದ ವಜ್ರದಿ ॥೮॥

ರಾಗ—ಸಾವೇರಿ । ತಾಳ - ಅಷ್ಟ

ಮತ್ತೆ ಸಾಲುವನೆಚ್ಚಸ್ತ್ರಗಳಲಿ । ಧರ್ಮ–ಗುಪ್ತ ಮೈಮರೆತನಮಯ್ಯಲ್ಲಿ! ಶಕ್ತಿಯನೆತ್ತಲಾ ಧೂರ್ತನು । ಕೈ - ಕಿತ್ತು ನುಡಿದನಂತು ವೀರನು ॥೧॥ ಛಪ ದುಷ್ಟಾಧಮನೆ ನಿಲ್ಲೆಲೊ ನಿನ್ನ । ತಲೆ - ಕಡಿದಿಕ್ಕಿ ದಿಗುಬಲಿ ಕೊಡುವೆನಾ ।

ಅನುಸತ್ಕಾತ್ಮರ ತರಿವಧಮುರ । ಬಾಳ - ಲೆಡೆಗೊಟ್ಟರುಂಟೆ ಸದಾಚಾರ ॥೨॥
ವಿಕೆಂಡೆಯುಧ್ದೊ ದುಷ್ಟನೆನುವೆಯೊ । ಎಷ್ಟ–ಸ್ತ್ಯಾನವಮಾನವನೆತ್ತಿ ಹಳಿವೆಯೊ ।
ನೀನಾರೊ ಜ್ಞಾನವಿಲ್ಲದೆ ಬಂದು । ವ್ಯರ್ಥ–ಹಾನಿಹೊಂದುವುದೇಕೆ ನಡೆ ಮುಂ
ದು ॥ ೩ ॥ ಶ್ಲಾಘ್ಯ ಬಲ್ಲೆಯು ವೀರಭದ್ರನ । ರಣಮುಲ್ಲ ದಕ್ಷಗೆ ಶಿಕ್ಷೆಯಿತ್ತನಾ ।
ಸಾಲ್ವ ನಿನ್ನನ್ನರಣಳಸುತ । ಶೀಲ–ವುಳ್ಳರ ಪೊರೆಯಲ್ಬೆದಿಹೆಸಿತ್ತ ॥೪॥ ವೀರನ
ಹುಡೆ ಭೂಪಾಕಾರದಿ । ಮ್ಯ–ಹೇರಿ ಬಂದ್ಯೆ ಲೋಕಾಚಾರದಿ । ಪಾರುಪತ್ಯಗ
ಳೇಕೆ ನಡೆಯತ್ತ । ನೀತಿ-ಸಾರವ ಬಲ್ಲೆ ಸಾಯದಿರತ್ತ ॥೫॥ ಪೃಥ್ವಿತ್ರಯವ
ಬಲ್ಲುದೆನ್ನಯು । ಪಾರುಪತ್ಯವನರಿಯದೆ ಗರ್ವಿಗೆಯು । ಸತ್ಯವಂತರ ನಿಕ್ಕಿ
ಧಾಷ್ಟ್ರ್ಯದಿ । ಬಾಳ–ಲೆತ್ನಲ್ಸೆದಲು ಬಿಡೆ ಸಾಮದಿ ॥ ೬ ॥ ಏನ ಹೇಳ್ವೆಯೊ
ಸಾಲ್ವನಿದಿರೊಳು । ಶೂಲ–ಪಾಣಿಯೆ ನಿಲ್ಲಲಾಪನೆ ಪೇಳು । ನೀನೇಕೆ ಸೆಣಸ
ಲಾಟಪೆಯೆಂದು । ಹೊಯ್ದ–ನೇನೆಂಬೆ ಗದೆಯೊಳಾ ಖಳನಂದು ॥೭॥ ಅನಿತ
ರೊಳೆದ್ದು ಹೂಂಕರಿಸುತ । ನೃಪ–ತನುಜನು ಧನುವ ಠೇಂಕರಿಸುತ । ಘನದಿ
ವ್ಯಾಸ್ತ್ರವನಾಯ್ದು ತೆಗೆದನು । ಸಿಂ–ಜಿನಿಯನೆಳೆದು ಸೆಳೆದಿಟ್ಟನು ॥೮॥

॥ ಭಾಮಿನಿ ॥

ದಕ್ಷರಿಪುವಿನ ರಕ್ಷೆಯಿಂ ನೃಪ । ನಕ್ಷಿಯಲಿ ಕಿಡಿಗೆದರುತಸುರನ । ಕುಕ್ಷಿ
ಬಿರಿವಂತೆಸೆಯಲಾ ದಿವ್ಯಾಸ್ತ್ರವನು ಭರದಿ ॥ ರಕ್ಷಿಸುವರಾರಸುರರಾಯನ । ಲಾ
ಕ್ಷಣದಿ ಶಿರವರಿದು ಸಾಲ್ವನ । ರಾಕ್ಷಸನು ಧರೆಗೊರಗಿದನು ಕುಲಗಿರಿಗಳದು
ರ್ವಂತೆ ॥೧॥

ರಾಗ-ಸೌರಾಷ್ಟ್ರ । ತಾಳ-ತ್ರಿವುಡೆ

ಸುರರು ಘೇಯೆಂದುಲಿದು ಹೂಮಳೆ । ಗರೆಯಲಾ ನೃಪನಂದನನ ಭಯ।
ಹರಿಸಿ ಮರಳಿದನತ್ತ ವೀರೇ । ಶ್ವರನು ಬಳಿಕ ॥೧॥ ಪರಿಕಿಸುತ ದ್ರಮಿಳಾದಿ
ಗಂಧ । ರ್ವರು ನಲಿವರೆಮ್ಮಂಶುಮತಿಯೊ । ಪರಮಭಾಗ್ಯದೊಳೊದಗಿದಳು
ದಯ । ಸಿರಿಯೆನುತ್ತ ॥೨॥ ಕರೆಯಲಟ್ಟಿದರಂಶುಮತಿಯನು । ಭರದಿ ಬಂದೆ
ದೆಯುಪ್ಪಿ ಪತಿಯೊಡ । ವೆರಸಿ ಹರುಷಾಶ್ರುಗಳ ಸುರಿಸುತ । ಮೆರೆದಳಾಗ॥೩॥
ಬಳಿಕ ನೃಪಸುತನಾ ಸ್ವದೇಶಕೆ । ನಲವಿನಿಂ ಪೊರಡಲ್ಕೆ ಸಕಲರು । ಬಳಸಿದರು
ನಾನಾ ಸುವಾದ್ಯಾ । ವಳಿಗಳೊಡನೆ ॥೪॥ ಬರುತಿರಲ್ಕೆ ವಿದರ್ಭ ವಿಷಯೊಂ ।
ತರದ ಜನರಾಧರ್ಮಗುಪ್ತನ । ಹರುಷದಿಂದಿದಿರ್ಗೊಂಡು ಕಾಣ್ಕೆಯ । ನಿರಿಸಲ

ಡಿಗೆ ॥ ೫ ॥ ರಾಜಪಟ್ಟವಗಟ್ಟಿ ಗುರುಬುಧ । ರೋಜೆಯಿಂ ಸತ್ಕರಿಸಲಾತನು ।
ರಾಜಧರ್ಮದೋಳಾಳ್ದನ ಮರರ । ಭೂಜದಂತೆ ॥ ೬ ॥ ಬರೆದನೀ ಸತ್ಕಥೆಯ
ನಗಜಾ । ವರನ ದಯೆಯಿಂ ವಿಷ್ಣು ಶರ್ಮನು । ಸರಳಕನ್ನಡ ನುಡಿಯೊಳಿಲ್ಲರಿ ।
ಗರಿವತೆರದಿ ॥ ೭ ॥ ವರುಷ ಪರಿಧಾವಿಯೊಳಗ್ಯೆದನೆ । ವರದಿವಸ ಮಾಸಂಗಳ
ಲಿತಾ । ನೊರೆದನೀತೆರ ಯಕ್ಷಗಾನದ । ಪರಿಯನರಿತು ॥ ೮ ॥ ಓದಲಿದು ಸು
ವ್ರತಮಹಾತ್ಮೆಯ । ಬೋಧಿಸುವ ಸತ್ಕಾತ್ಮರೊಳ್ಗತೆ । ಯೊದವುದು ಶುಭವಿ
ಭವಸಂಪದ । ವಾದರಿಸಲು ॥ ೯ ॥

॥ ಭಾಮಿನಿ ॥

ಹರಿಯದಯೆಯಿಂ ವಿಷ್ಣು ಶರ್ಮನು । ಬರೆದನೀತೆರ ಕೃಷ್ಣ ವಿಜಯವ ।
ಹರಿಯಲೀಲೆಯನಕ್ಷಕೇಳಿಯಶೋಕಸಂದರಿಯ ॥ ಸಿರಿಯ ಕೌಸಲ್ಯೆಯವಿವಾ
ಹವ । ಪುರಹರನ ಕುಂಭಾಸಿ ಮಧುಪುರ । ಕರಿಮುಖನ ಕಲಿಕರ್ಣ ಭೀಮಾರ
ಚರಿತೆಗಳ ಮುದದಿ ॥ ೧ ॥

ಮಂಗಲಂ ಜಯ ಮಂಗಲಂ ॥
ಮಂಗಲಂ ಜಯ ಮಂಗಲಂ ಶ್ರುತಿ । ಸಂಗಗೆ ಭಸಿತಾಂಗಗೆ ॥ ಪ ॥ ನಂದಿ
ವಾಹನ ಇಂದುಧರ ಸಾ । ನಂದಗೆ–ಗುಣಸಾಂದ್ರಗೆ ॥ ಸ್ಕಂದಪಿತ ಸಿದ್ಧಗಂಧ
ಕರುಣಾ । ಸಿಂಧುಗೆ–ಮುನಿವಂದ್ಯಗೆ ॥ ೧ ॥ ಮಾರಮಥನಗೆ ಘೋರರೌದ್ರಾ ।
ಕಾರಗೆ-ಓಂಕಾರಗೆ ॥ ಸಾರಧರ್ಮೋದ್ಧಾರ ಶರಧಿಗ । ಭೀರಗೆ–ಭವದೂರಗೆ ॥೨॥
ಕಾಲಕಂಠಗೆ ಕಾಲನೇತ್ರ ನಿ । ರಾಳಗೆ-ಜಿತಕಾಲಗೆ ॥ ಸ್ಥೂಲಗಾತ್ರ ವಿಶಾಲ ಭ
ಸ್ಮೋ । ದ್ಧೂಳಗೆ–ತ್ರಿಶೂಲಿಗೆ ॥ ೩ ॥ ದಕ್ಷಹರ ಭಾಳಾಕ್ಷ ಭುವನಾ । ಧ್ಯಕ್ಷಗೆ-
ಸುರಪಕ್ಷಗೆ ॥ ಮೋಕ್ಷದಾತಗೆ ರಾಕ್ಷಸರಕುಲ । ಶಿಕ್ಷಗೆ–ವಿಷಮಾಕ್ಷಗೆ ॥ ೪ ॥
ದೋಷನಾಶ ಗಿರೀಶ ಭೂತಾ । ಧೀಶಗೆ–ಫಣಿಭೂಷಗೆ ॥ ಲೇಸುಗೈದೆಮ್ಮಾಶೆ ನ
ಲಿಸುವ । ಈಶಗೆ ಮಾಲಿಂಗೇಶಗೆ ॥ ೫ ॥

ಇತಿಕುಂಭಾಸಿಕ್ಷೇತ್ರಾಧಿಷ್ಠಿತ ಶ್ರೀ ಮಹಾಗಣಾಧೀಶ್ವರನ ಪಾದಾರವಿಂದ
ಸ್ಮರಣ ಪ್ರಭಾವದಿಂ ವಿಷ್ಣುಶರ್ಮಕವಿರಚಿತಮಾದ ಅಂಶುಮತಿ – ಕಲ್ಯಾಣ
ಮೆಂಬ ಯಕ್ಷಗಾನ ಪ್ರಬಂಧಂ ಪರಿಸಮಾಪ್ತಮಾದುದು.

ಮಂಗಲಂ ಮಹಾ ಶ್ರೀ! ಶ್ರೀ! ಶ್ರೀ!

ಪದ್ಯಗಳ ಸಂಖ್ಯೆ ೩೪೧
ದಿನಾಂಕ ೭—೯—೧೯೭೨

— ತಪ್ಪೊಪ್ಪುಗಳು —

ಪುಟ	ಪಂಕ್ತಿ	ತಪ್ಪು	ಒಪ್ಪು
2	5	ತರುಣಿ	ತರಣಿ
,,	7	ವೃತ 8 ಸಭವ	ವ್ರತ, ನಭವ
3	4	ದೇಶವು 18 ಧ್ಯೆಯ	ದೇಶವ. ಧ್ಯೇಯ
4	7	ಮೂಡ 19 ನಸಿತರೊಳ್	ಮೂಢ, ನನಿತರೊಳ್
,,	22	ನಮನೇಂದ್ರ	ನಮರೇಂದ್ರ
5	2	ಕಾಡಲೇಕಿಂತು	ಕಾದಲೇತಕಿಂತು
,,	9	ಮುನಿಯಭಾಂಗಣ	ಮುನಿಯಭ್ರಾಂಗಣ
6	1	ಕ್ಷಿಪುದಿ 11 ಧರಣಿಪಾಲ	ಕ್ಷಿಪ್ರದಿ, ಧರಣಿಪ
,,	14	ಭೂಪನ	ಭೂಪನು
7	22	ಪಾರ್ಥ–ವ್ಯರ್ಥ ॥೧॥	–॥೧॥
8	23	ಮರಳಿದ	ದಾನವ
10	12	ಪತ್ನಿ	ಪತಿ
12	2	ಹೀನನಲೌ 21 ತತ್ಪಾರ್ಥ	ಹೀನನಲ್ಲೌ, ತತ್ವಾರ್ಥ
16	1	ನಾಯ್ದು	ನಾಯ್ದು
21	20	ಜಲಕೀಳಿ	ಜಲಕೇಳಿ
23	9	ಮೆಚ್ಚಿಸಿದೆನು	ಮೆಚ್ಚಿದೆನು
24	9	ಮುಂದೆ	ಮುಂದೆಳೆದು
,,	13	ಕಾಂತೆ 25 ಶೋಖಿಸ	ಕಾಂತ, ಶೋಕಿಸ
25	5	ನಾಜ್ಞಾವರ್ತಿ	ನಾಜ್ಞಾವರ್ತಿ
27	16	ನಿಲ್ಲೆಲೊ 26 ನಾತ್ನ	ನಿಲ್ಲೆಲೊ, ನಾತ್ಮ
28	17	ನಗವರ್ಕೆ 19 ಮಂತ್ರಿ	ನಗುವರ್ಕೆ, ಮಂತ್ರ
29	4	ವಾರಣಾಳ 10 ಬಿಲ	ವಾರಣಾಳಿ, ಬಲ
30	14	ಭಜಗಾಸ್ತ್ರ	ಭುಜಗಾಸ್ತ್ರ
32	23	ಭಯ	ಜಯ